ಎಸ್. ಎಂ. ಪಂಡಿತ್

ವಿ. ಟಿ. ಕಾಳೆ



ಕರ್ನಾಟಕ ಲಲಿತಕಲಾ ಅಕಾಡೆಮಿ

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು-560002

ಎಸ್.ಎಂ. ಪಂಡಿತ್
S.M. PANDITH

ವಿ.ಟಿ. ಕಾಳೆ

V.T. KALE

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002.

Karnataka Lalithakala Academy
Kannada Bhavana, J.C. Road, Bangalore - 560 002.

S.M. Pandit : A Biography
Author : **V.T. Kale**
Published by : **V. Mallikarjunaswamy**, Registrar, Karnataka Lalithakala Academy, Kannada Bhavana, J.C. Road, Bangalore - 560 002. Ph. 080-22480297

First Edition	:	1989
Second Edition	:	1992
Third Edition	:	2007

Pages : 56

Price : Rs. 50-00

ಲೇಖಕರು

ವಿ.ಟಿ. ಕಾಳೆ

ಪ್ರಕಟಣಾ ಸಮಿತಿ


ಪುಂಡಲೀಕ ಕಲ್ಲಿಗನೂರ

ಡಾ. ಲಕ್ಷ್ಮೀದೇವಿ ಗವಾಯಿ

ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ

ಮುಖಪುಟ ವಿನ್ಯಾಸ : ಪುಂಡಲೀಕ ಕಲ್ಲಿಗನೂರ

Printed By :
Jagruthi Printers
#56/1-6, Narasimhaiah Garden,
Kottigepalya, Magadi Main Road,
Bangalore - 560 091. Ph. 9886249672



ಎಸ್.ಎಂ. ಪಂಡಿತ್

ಮುನ್ನುಡಿ


ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸುತ್ತಿರುವ "ಕಲಾವಿದರ ಮಾಲೆ" ಯು ಕರ್ನಾಟಕದ ಖ್ಯಾತ ಕಲಾ ಸಾಧಕರನ್ನು, ಅವರ ಸಾಧನೆಗಳನ್ನು ಕಲಾಪ್ರಿಯ ಓದುಗರಿಗೆ ಪರಿಚಯಿಸುತ್ತ ಬಂದಿದೆ, ಜನಪ್ರಿಯವೂ ಆಗಿದೆ. ಅಕಾಡೆಮಿಯ ಇನ್ನಿತರ ಮೌಲಿಕ ಕಲಾ ಸಾಹಿತ್ಯ ಪ್ರಕಟಣೆಗಳಂತೆ ಈ ಮಾಲೆಯ ಹೊತ್ತಗೆಗಳಿಗೂ ಬಹುಬೇಡಿಕೆಯಿರುವುದರಿಂದ ಮತ್ತೆ ಮತ್ತೆ ಪ್ರಕಟಿಸಬೇಕಾಗಿ ಬಂದಿರುವುದು ಅಕಾಡೆಮಿ ಹೆಮ್ಮೆಯಿಂದ ಬೀಗುವಂತಾಗಿದೆ.

ಕರ್ನಾಟಕ ಸುವರ್ಣ ವರ್ಷಾಚರಣೆಯ ಅಂಗವಾಗಿ ವಿಶೇಷ ಅನುದಾನದಡಿಯಲ್ಲಿ ಹತ್ತು ಪುಸ್ತಕಗಳು ಸಾಮಾನ್ಯ ಯೋಜನೆಯಲ್ಲಿ ಹತ್ತು ಪುಸ್ತಕಗಳು ಈ ಬಾರಿ ಪ್ರಕಟಗೊಳ್ಳುತ್ತಿರುವುದು ಸಂತೋಷವನ್ನುಂಟು ಮಾಡಿದೆ.

ಈ ನಿಟ್ಟಿನಲ್ಲಿ ಈಗ ಮೂರನೆಯ ಮುದ್ರಣಗೊಳ್ಳುತ್ತಿರುವ "ಎಸ್.ಎಂ. ಪಂಡಿತ" ಕೃತಿಯನ್ನು ಹೊಸ ರೂಪದಲ್ಲಿ ಹಿಂದೆ ಉಳಿದುಕೊಂಡಿದ್ದ ಕೆಲವು ಲೋಪದೋಷಗಳ ತಿದ್ದುಪಡಿಯೊಂದಿಗೆ ಕಲಾಸಾಹಿತ್ಯಪ್ರಿಯರ, ಓದುಗರ ಅವಗಾಹನೆಗೆ ತರಲು ಯತ್ನಿಸಲಾಗಿದೆ. ಅಷ್ಟಾದರೂ ಅಲ್ಲಲ್ಲಿ ಮುದ್ರಣ ದೋಷಗಳು ಉಳಿದುಕೊಂಡಿರುವ ಸಾಧ್ಯತೆಗಳಿವೆ. ಸೂಕ್ತ ಸಲಹೆ ಸೂಚನೆಗಳೊಂದಿಗೆ ಅವುಗಳನ್ನು ಸರಿಪಡಿಸಲು ಅಕಾಡೆಮಿಯು ಯತ್ನಿಸುತ್ತದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಈ ಪ್ರಯತ್ನಗಳಿಗೆ ಕಲಾಸಾಹಿತ್ಯಾಭಿಮಾನಿ ಗಳಿಂದಲೂ ಓದುಗರಿಂದಲೂ ಪ್ರೋತ್ಸಾಹ ದೊರಕುತ್ತದೆ ಎಂದು ಅಕಾಡೆಮಿಯು ಆಶಿಸುತ್ತದೆ.

ವಿ.ಟಿ. ಕಾಳೆ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

ಬೆಂಗಳೂರು
2007



ಎಸ್.ಎಂ. ಪಂಡಿತ್

ಹಿಂದೊಮ್ಮೆ ಬಹಮನಿ ಸುಲ್ತಾನರ ಕಾರ್ಯಕ್ಷೇತ್ರವಾಗಿ ಐತಿಹಾಸಿಕ ವೈಭವವನ್ನು ಮೆರೆದ, ಹಾಗೂ ಶರಣ ಬಸವೇಶ್ವರ, ಸಂತ ಖಾಜಾ ಬಂದೇನವಾಜ ಮೊದಲಾದ ಪುಣ್ಯ ಪುರುಷರು ನಡೆದಾಡಿ ನೆಲವನ್ನು ಪಾವನಗೊಳಿಸಿಕೊಂಡ ಕಲಬುರ್ಗಿ ರಸಋಷಿ ಎಸ್.ಎಂ. ಪಂಡಿತರ ಹುಟ್ಟೂರು. ಅಂದಿನ ಕಲಬುರ್ಗಿ ಇಂದು ಗುಲಬರ್ಗಾ ಎಂಬ ನಾಮಧೇಯದಿಂದ ವಿಭಾಗೀಯ ಗಂಡು ಮೆಟ್ಟಿನ ಸ್ಥಳವಾಗಿದೆ.

ಈ ಶತಮಾನದ ಎರಡನೆಯ ದಶಕ. ವಿಶ್ವದ ಭವಿಷ್ಯವನ್ನೇ ಬದಲಾಯಿಸಿದ ಜಾಗತಿಕ ಮೊದಲನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲ. ಭಾರತ ದೇಶವನ್ನೇ ಕಬಳಿಸಿಬಿಡಲು ಬಾಯ್ತೆರೆದು ಹರಡಿದ ಪ್ಲೇಗುಮಾರಿಯಿಂದ ಇಡೀ ದೇಶವೆಲ್ಲ ನಡುಗಿ ತತ್ತರಿಸುತ್ತಿದ್ದ ಸಮಯ. ಜೀವ ಉಳಿಸಿಕೊಳ್ಳಲು ಊರು ತೊರೆದು ಕಾಡಿನಲ್ಲಿ ಗುಡಿಸಲುಗಳಲ್ಲಿ ಜನರು ವಾಸಿಸುತ್ತಿದ್ದ ಭೀಕರ ಪ್ರಸಂಗದಲ್ಲಿ, ಅಂದರೆ ಕ್ರಿ.ಶ.1916ರ ಮಾರ್ಚ್ 25ರಂದು ಪಂಡಿತರ ಜನನ. ''ಸಾಂಬಾನಂದ ಮೋನಪ್ಪ ಪಂಡಿತ'' ಅವರ ಪೂರ್ಣ ಹೆಸರು.

ಕಲಬುರ್ಗಿಯಲ್ಲಿ ಕಂಚುಗಾರ ವೃತ್ತಿಯಲ್ಲಿ ನಿರತರಾದ 'ಪಂಡಿತ' ಮನೆತನದ ಮೋನಪ್ಪ ಸತಿ ಕಾಳಮ್ಮನೊಡಗೂಡಿ ಸಂಸಾರ ನಿರ್ವಹಣೆಯಲ್ಲಿ ತೊಡಗಿದ್ದರು. ದಂಪತಿಗಳಿಬ್ಬರೂ ತಿಂಥಿಣಿಯ ಮೌನೇಶ್ವರ ಸ್ವಾಮಿಯ ಪರಮ ಭಕ್ತರು. ಕಲಬುರ್ಗಿಯಿಂದ ತಿಂಥಿಣಿಯವರೆಗೆ ಸುಮಾರು 150 ಕಿಲೋಮೀಟರುಗಳ ದೂರವನ್ನು ಕಾಲು ನಡಿಗೆಯಿಂದಲೇ ಕ್ರಮಿಸಿ,

ಸ್ವಾಮಿಯ ದರ್ಶನ ಪಡೆದು, ಸ್ವಾಮಿಯ ಎದುರಿನಲ್ಲಿ ತಮ್ಮ ಮನೋಭಿಲಾಷೆಯನ್ನು ತೋಡಿಕೊಳ್ಳುವ ಪರಿಪಾಠವನ್ನಿಟ್ಟುಕೊಂಡವರು. ವೃತ್ತಿ, ಪ್ರವೃತ್ತಿಗಳೆರಡನ್ನೂ ಮೌನೇಶ್ವರನ ಅಪೇಕ್ಷೆಯಂತೆ ನಡೆಸಿಕೊಂಡು ಬಂದವರು. ಇಂಥ ಸಾತ್ವಿಕ ದಂಪತಿಗಳ ಗರ್ಭ ಸಂಜಾತರಾದ ವಿಶ್ವ ವಿಖ್ಯಾತ ಕಲಾವಿದ ಎಸ್.ಎಂ. ಪಂಡಿತರು ತಮ್ಮ ಜನನ ಕಾಲದ ಪ್ರಸಂಗವನ್ನು ಕುರಿತು ಭಾವಲೀನರಾಗಿ ಹೇಳುವಾಗ ಅವರ ಮನೋಭಾವನೆಯ ಸ್ತರಗಳ ಮಿಡಿತದ ಕಲ್ಪನೆಯುಂಟಾಗುತ್ತದೆ; ಅವರಲ್ಲಿನ ಅದಮ್ಯವಾದ ದೈವಭಕ್ತಿಯ ಸುಳಿವು ಎದ್ದು ಕಾಣುತ್ತದೆ.

ಅಂದು ಕಲಬುರ್ಗಿಯಲ್ಲಿ ಇನ್ನೊಬ್ಬ ಅವಧೂತ. ಲಚ್ಯಾಣದ ಸಿದ್ದಪ್ಪಜ್ಜನವರ ಆಗಮನ. ಭಕ್ತರು ವೈಭವದಿಂದ ಅಜ್ಜನವರ ಮೆರವಣಿಗೆಯನ್ನು ತೆಗೆದಿದ್ದರು. ಕಲಬುರ್ಗಿಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಸಾಗಿತ್ತು. ಸಾಧ್ವಿ ಕಾಳಮ್ಮ ತುಂಬಿದ ಕೊಡವನ್ನು ಹೊತ್ತು ಮನೆಗೆ ಹೋಗುತ್ತಿದ್ದಳು, ಅಜ್ಜನವರ ದರ್ಶನಕ್ಕಾಗಿಯೋ ಮೆರವಣಿಗೆಯನ್ನು ನೋಡಲೆಂದೋ ಗಕ್ಕನೆ ನಿಂತುಕೊಂಡಳು. ಅಜ್ಜನವರ ದೃಷ್ಟಿ ಕಾಳಮ್ಮನ ಮೇಲೆ ಬಿತ್ತು. ಪಲ್ಲಕ್ಕಿಯನ್ನು ನಿಲ್ಲಿಸುವಂತೆ ಬೋವಿಗಳಿಗೆ ಹೇಳಿದರು. ಪಲ್ಲಕ್ಕಿ ನಿಂತಿತು. ಕೊಡವನ್ನು ಹೊತ್ತು ಹಾದಿಯ ಬದಿಯಲ್ಲಿ ದೂರನಿಂತು ಮೆರವಣಿಗೆಯನ್ನು ನೋಡುತ್ತಿದ್ದ ಕಾಳಮ್ಮನನ್ನು ತಮ್ಮ ಹತ್ತಿರ ಬರುವಂತೆ ಸನ್ನೆ ಮಾಡಿದರು. ಕಾಳಮ್ಮ ಯಾಂತ್ರಿಕವಾಗಿ, ತನಗರಿವಿಲ್ಲದಂತೆ ಅಜ್ಜನವರೆದುರು ನಿಂತಳು. ಅಜ್ಜನವರು ಮುಷ್ಟಿಯಿಂದ ಕಾಳಮ್ಮನ ತುಂಬಿದ ಕೊಡದಲ್ಲಿ ಪ್ರಸಾದವನ್ನು ಸುರಿಯುತ್ತಾ ಅಸ್ಪಷ್ಟವಾದ ವಾಣಿಯಲ್ಲಿ –

''ತಾಯಿ, ನಿನಗೊಬ್ಬ ಮಗ ಹುಟ್ಟುತ್ತಾನೆ. ''ಮಗ ! ಮಗ ! ಮಗ!!! ಪುತ್ರರತ್ನ'' ಎಂದು ನುಡಿದಂತೆ ಭಾಸವಾಯಿತು. ಕಾಳಮ್ಮ ಧನ್ಯತೆಯಿಂದ ಅಜ್ಜನವರಿಗೆ ವಂದಿಸಿದಳು. ಹೀಗೆ ಲಚ್ಯಾಣದ ಅವಧೂತ ಸಿದ್ದಪ್ಪಜ್ಜನವರ ಕೃಪಾಶೀರ್ವಾದಗಳಿಂದ ಗರ್ಭ ಧರಿಸಿ ನವಮಾಸ ತುಂಬಿದ ಕಾಳಮ್ಮನಿಗೂ ಪತಿ ಮೋನಪ್ಪನವರಿಗೂ ಸ್ವರ್ಗ ಮೂರೇಗೇಣು; ಸಂಭ್ರಮವೋ ಸಂಭ್ರಮ ಇನ್ನೇನು ಮಗ ಹುಟ್ಟುತ್ತಾನೆಂದು. ಹತ್ತು ತಿಂಗಳುಗಳು ಕಳೆದವು. ಪುತ್ರ ಜನನವಾಗಲಿಲ್ಲ ; ಹನ್ನೊಂದು ತಿಂಗಳುಗಳೂ ಮುಗಿಯುತ್ತಾ ಬಂದವು. ಸಂಭ್ರಮ ಆತಂಕಕ್ಕೆ ತಿರುಗಿತ್ತು. ಮನೆಯಲ್ಲಿ ಎಲ್ಲರಿಗೂ ಗಾಬರಿ, ಭಯ! ಹನ್ನೊಂದು ತಿಂಗಳುಗಳೂ ಪೂರ್ಣಗೊಂಡ ನಂತರ ಪುತ್ರ ಜನನವಾಯಿತು. ಮನೆಯಲ್ಲಿ ಆವರಿಸಿದ ಭಯ–ಭೀತಿ, ಆತಂಕ ದುಗುಡಗಳೆಲ್ಲ ದೂರಾಗಿ ಮತ್ತೆ ಸಂಭ್ರಮ ಮರುಕಳಿಸಿತು. ಪುತ್ರನಿಗೆ ''ಸಾಂಬಾನಂದ'' ಎಂದು ನಾಮಕರಣ ಮಾಡಿದರು.

ಹೀಗೆ ಎಸ್.ಎಂ. ಪಂಡಿತರು ಅವಧೂತ ಸಿದ್ದಪ್ಪಜ್ಜನವರ ವರಪ್ರಸಾದದಿಂದಲೇ ತಮ್ಮ ಜನನವಾಯಿತು ಎಂದು ಕಲಬುರ್ಗಿಯ ತಮ್ಮ ಮನೆಯಲ್ಲಿ ತೂಗು ಹಾಕಿದ ಸಿದ್ದಪ್ಪಜ್ಜನವರ ವರ್ಣಚಿತ್ರವನ್ನು ತೋರಿಸುತ್ತ ಮಾರ್ಮಿಕವಾಗಿ ಹೇಳುತ್ತಾರೆ.

ಕಂಚುಗಾರ ವೃತ್ತಿಯಿಂದ ಹಿತ್ತಾಳೆಯ ಹಾಗೂ ತಾಮ್ರದ ಕೊಡ, ತಂಬಿಗೆ ಪಾತ್ರೆಪಡಗಗಳನ್ನು ಸಿದ್ಧಪಡಿಸಿ ವ್ಯಾಪಾರ ಮಾಡುತ್ತಿದ್ದ ಮೋನಪ್ಪನವರಲ್ಲಿ ಕಲಾಭಿರುಚಿಯು ಅವರಿಗರಿವಿಲ್ಲದಂತೆ ಬೆಳೆದು ಬಂದಿತ್ತು. ಮನೆಯ ಗೋಡೆಗಳ ಮೇಲೆಲ್ಲ ರಾಜಾ ರವಿವರ್ಮರ ಅಚ್ಚಾದ ಚಿತ್ರಪಟಗಳನ್ನು ಅಚ್ಚುಕಟ್ಟಾಗಿ ತೂಗುಹಾಕಿದ್ದರು. ಗಣಪತಿ ಹಬ್ಬದ ದಿನಗಳಲ್ಲಿ ಗಣಪತಿಯ ಪ್ರತಿಮೆಗಳನ್ನು ಮಾಡುತ್ತಿದ್ದರು. ಬಾಲಕ ಸಾಂಬಾನಂದನಿಗೆ ತಯಾರಿಸುತ್ತಿದ್ದ ಗಣಪತಿಯ ಪ್ರತಿಮೆಗಳನ್ನೂ, ಚಿತ್ರಿಸುವ ನಕ್ಷೆಗಳನ್ನೂ, ಗೋಡೆಯ ಮೇಲೆ ತೂಗುಹಾಕಿದ ರಾಜಾ ರವಿವರ್ಮರ ಲಕ್ಷ್ಮೀ, ಸರಸ್ವತಿ, ಶಿವ-ಪಾರ್ವತಿ ಮುಂತಾದ ಚಿತ್ರಗಳನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ಆಗಲೇ ಇಂಥ ಚಿತ್ರಗಳನ್ನು ತಾನೂ ಚಿತ್ರಿಸಲೇಬೇಕು ಎಂಬ ಮಹತ್ತರ ಮಹತ್ವಾಕಾಂಕ್ಷೆಯ ಬೀಜಾಂಕುರ ಬಾಲಕ ಸಾಂಬಾನಂದನಲ್ಲಿ ಮೊಳಕೆಯೊಡೆಯಿತು.

ತಂದೆ ತಾಯಿಗಳು ಮಗನು ಓದಿ ವಿದ್ಯಾವಂತನಾಗಲಿ ಎಂದು ಶಾಲೆಗೆ ಸೇರಿಸಿದರು. ಎಲ್ಲ ಮಕ್ಕಳೂ ಶಾಲೆ ಬಿಟ್ಟಾಗ ಬೇಗ ಮನೆ ಸೇರುವಂತೆ ಸಾಂಬಾನಂದ ಮನೆ ಸೇರುತ್ತಿರಲಿಲ್ಲ ; ಶಾಲೆಯಲ್ಲಿಯೂ ಇರುತ್ತಿರಲಿಲ್ಲ. ಬದಲಾಗಿ ಸುಂದರವಾಗಿ ಬೆಳೆದು ನಿಂತ ಗಿಡ ಗಂಟೆಗಳನ್ನು ನೋಡಿ ಆನಂದಿಸುವುದರಲ್ಲಿ ತಲ್ಲೀನನಾಗಿರುತ್ತಿದ್ದ. ಮಗನು ಮನೆಗೆ ಬರಲಿಲ್ಲವೆಂದು ತಂದೆ ತಾಯಿಗಳು ಊರೆಲ್ಲ ಹುಡುಕಿ, ಕೊನೆಗೆ ದಾರಿಯಲ್ಲಿ ಬೆಳೆದುನಿಂತ ಸುಂದರವಾದ ಕಳ್ಳಿಯ ಸಾಲನ್ನೋ, ಗಿಡ-ಗಂಟೆಗಳನ್ನೋ ದೂರದ ಗುಡ್ಡ-ಬೆಟ್ಟವನ್ನೋ ತಾಸುಗಟ್ಟಲೇ ನಿಂತು ನೋಡಿ ಆನಂದಿಸುವ ಹುಡುಗನನ್ನು ಮನೆಗೆ ಕರೆದುತಂದ ಪ್ರಸಂಗಗಳೂ ಎಷ್ಟೋ. ಹೀಗೆ ಶಿಶುವಾಗಿರುವಾಗಲೇ ಸಾಂಬಾನಂದನಿಗೆ ನಿಸರ್ಗ ಸೌಂದರ್ಯಾನುಭೂತಿಯ ಅರಿವಾಗತೊಡಗಿತು. ಅಲ್ಲದೇ ರಾಜಾ ರವಿವರ್ಮರ ಚಿತ್ರಗಳ ಪ್ರಭಾವ ಸಾಂಬಾನಂದನನ್ನು ಚಿತ್ರ ಕಲಾಕ್ಷೇತ್ರಕ್ಕೆ ಕಾಲಿರಿಸಲು ಪ್ರೇರಕ ಶಕ್ತಿಯಾಯಿತು; ಸ್ಫೂರ್ತಿಯ ಸೆಲೆಯಾಯಿತು. ಅಂತೆಯೇ ಪಂಡಿತ್ ಅವರು ಹೇಳುತ್ತಾರೆ. ''ನಿಸರ್ಗವೇ ಮೊದಲ ಗುರು, ಅದಕ್ಕಾಗಿ ಕಲಾವಿದನಾಗಲೀ, ಸೌಂದರ್ಯಾನ್ವೇಷಕನಾಗಲೀ, ಪ್ರಾಣಿಕೋಟಿಯ ಆಗು-ಹೋಗುಗಳಿಗೆ ಸ್ಪಂದಿಸುವ, ಹಾಗೂ ಪ್ರಕೃತಿಯೊಂದಿಗೆ ಬೆರೆತು ಕ್ಷಣಕ್ಷಣಕ್ಕೂ ಚಿನ್ನಾಟವಾಡುವ ಸೌಂದರ್ಯ ಚೇತನವನ್ನು ಕಂಡುಕೊಳ್ಳಲು ಕಣ್ಣುಗಳನ್ನು ಪಳಗಿಸಬೇಕಾಗುತ್ತದೆ. ಅದನ್ನೇ ನಾನು ಈ ಅರವತ್ತು ವರುಷಗಳಿಂದಲೂ ಸಾಧಿಸಲು ಯತ್ನಿಸುತ್ತಿದ್ದೇನೆ.''

ಹೌದು, ಪಂಡಿತಜೀಯವರ ಈ ಸಾಧನೆಯನ್ನು ಅವರ ದಿವ್ಯ ಕಲಾಕೃತಿಗಳು ಪ್ರತಿಪಾದಿಸುತ್ತವೆ. ಇದನ್ನೇ ಸತ್ಯನಿರೂಪಣೆ ಎಂದು ಹೇಳುವುದು. ಕಂಡದ್ದನ್ನು ಕಂಡಂತೆ, ಹೃದಯ ಮನಸ್ಸುಗಳಿಗೆ ವೇದ್ಯವಾಗುವಂತೆ ಜನತೆಯ ಮುಂದಿಡುವುದೇ ವಾಸ್ತವವಾದದ ಮಹತ್ವಾದನೆ. ಈ ದಿಶೆಯಲ್ಲಿ ಎಸ್.ಎಂ. ಪಂಡಿತರು ರಾಜಾ ರವಿವರ್ಮರನ್ನೂ ದಾಟಿ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆಂದು ಅವರ ಕಲಾಕೃತಿಗಳನ್ನು ಕಂಡವರು ಯಾರಾದರೂ

ಹೇಳಬಹುದು.

ಹತ್ತು ವರುಷದ ಬಾಲಕ ಸಾಂಬಾನಂದನೂ ಕೊಡಗಳನ್ನು ತಯಾರಿಸಿ ತಂದೆಗೆ ಸಹಾಯ ಮಾಡುತ್ತಿದ್ದ; ಸದಾಕಾಲವೂ ಸೃಷ್ಟಿ ಸೌಂದರ್ಯವನ್ನು ಸವಿಯುವುದರಲ್ಲಿ ಕಾಲ ಕಳೆಯುವ ಸಾಂಬಾನಂದನ ಓದು ಅಷ್ಟಕಷ್ಟೇ; ಹೀಗಾಗಿ ತಂದೆ ಮೋನಪ್ಪನವರಿಗೆ - ಮಗನು ಕೆಲಸ ಮಾಡಬೇಕಾದ ಕ್ಷೇತ್ರ ಕೊಡ ತಂಬಿಗೆಗಳನ್ನು ತಯಾರಿಸುವ ನನ್ನ ಈ ಪಡಸಾಲೆಯಲ್ಲ; ಅವನ ಕ್ಷೇತ್ರ ಚಿತ್ರ ಕಲಾಕ್ಷೇತ್ರ, ಎಂಬುದನ್ನು ಅರಿತುಕೊಳ್ಳಲು ತಡವಾಗಲಿಲ್ಲ. ಅದರಂತೆ ಅವರು ಸಾಂಬಾನಂದನಿಗೆ ಚಿತ್ರಕಲೆಯನ್ನು ಕಲಿಸಬಲ್ಲ ಗುರುಗಳಿಗಾಗಿ ಅರಸತೊಡಗಿದರು. ಕ್ರಿ.ಶ.1926ರಲ್ಲಿ ಬೀದರಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕೆಲಸಮಾಡುತ್ತಿದ್ದ ಭಾಸ್ಕರರಾವ ಎಂಬುವರ ಬಳಿಯಲ್ಲಿ ಚಿತ್ರಕಲಾಭ್ಯಾಸಕ್ಕಾಗಿ ಮಗನನ್ನು ಕಳಿಸಿದರು. ಪಂಡಿತರು ಕೆಲವು ಕಾಲ ಭಾಸ್ಕರರಾವ ಅವರಲ್ಲಿ ಅಭ್ಯಾಸ ಮಾಡಿ ಮರಳಿ ಕಲಬುರ್ಗಿಗೆ ವಾಪಸಾದರು. ಕಲೆಯ ಉನ್ನತ ವ್ಯಾಸಂಗವನ್ನು ಮಾಡಬೇಕೆಂಬ ಹಂಬಲ ಅವರನ್ನು ಒತ್ತರಿಸುತ್ತಿತ್ತು.

ಆಗ ಕಲಬುರ್ಗಿಯಲ್ಲಿ ಆಳಂದಕರ ಶಂಕರರಾಯರು ಶ್ರೇಷ್ಠ ಕಲಾವಿದರೆಂದು ಪ್ರಖ್ಯಾತರಾಗಿದ್ದರು. ಆಳಂದಕರರ ಒಂದು ಕಲಾಕೃತಿಯಿಂದ ಪ್ರಭಾವಿತರಾದ ಪಂಡಿತರು ಅವರ ಶಿಷ್ಯತ್ವವನ್ನು ವಹಿಸಿದರು. ಕ್ರಿ.ಶ.1931ರಲ್ಲಿ ಮದ್ರಾಸ್ ಕಲಾಶಾಲೆಯಿಂದ ಡಿಪ್ಲೊಮಾ ಪಡೆದು ಬಂದರು. ಅತ್ಯುತ್ತಮ ಶ್ರೇಣಿಯ ಸರ್ಟಿಫಿಕೇಟ್ ದೊರೆಯಿತಾಗಲೀ ಪಂಡಿತಜೀಯವರ ಕಲಿಯುವ ದಾಹ ಮಾತ್ರ ಹೆಚ್ಚಾಯಿತು. ಆಗಲೇ ಅವರಿಗೆ ಕಲಾಸಾಗರದ ಆಳದ ಕಲ್ಪನೆ ಬಂದಿರಬೇಕು.

''ಕಲಿಯುವಿಕೆಯನ್ನು ಮುಂದುವರಿಸಬೇಕು. ಅದಕ್ಕಾಗಿ ಮುಂಬಯಿಗೆ ಹೋಗಬೇಕು. ಅಲ್ಲಿನ ಸರ್ ಜೆ.ಜೆ. ಕಲಾಶಾಲೆಯಲ್ಲಿ ಹೆಚ್ಚಿನ ಅಭ್ಯಾಸ ಮಾಡಬೇಕು. ಅದರಿಂದ ಕಲಿಯುವಿಕೆಯ ದಾಹ ತುಸುಮಟ್ಟಿಗೆ ಉಪಶಮನವಾದೀತು'' ಎಂದುಕೊಂಡರು. ತಕ್ಷಣ ಅವರ ಸಂಕಲ್ಪವೂ ಈಡೇರಿತು. ಮುಂಬಯಿಯ ಜೆ.ಜೆ. ಕಲಾಶಾಲೆಯನ್ನು ಸೇರಿದರು.

ಕ್ಯಾಪ್ಟನ್ ಡಬ್ಲ್ಯೂ.ಇ.ಗ್ಲ್ಯಾಡಸ್ಟನ್ ಸೋಲೋಮನ್ ಅವರ ನಿರ್ದೇಶನದಲ್ಲಿ ಮುಂದುವರಿಯುತ್ತಿದ್ದ ಸರ್ ಜೆ.ಜೆ. ಕಲಾಶಾಲೆಯು ಭಾರತದ ಏಕೈಕ ಅತ್ಯುತ್ತಮ ಕಲಾಶಾಲೆಯಾಗಿತ್ತು. ಎ.ಎ. ಭೋಸ್ಲೆ, ಕೆ.ಬಿ. ಚೂಡೇಕರ, ಎಂ.ವಿ. ಧುರಂಧರ ಮುಂತಾದ ಅದ್ವಿತೀಯ ಚಿತ್ರ ಕಲಾವಿದರು ಅಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅಂಥ ವಾತಾವರಣದಲ್ಲಿ ತಮ್ಮ ಕಲಾಭ್ಯಾಸಕ್ಕೆ ಅವಕಾಶ ದೊರಕಿತ್ತಾದರೂ ಪಂಡಿತರಿಗೆ ಆ ಕಲಾಶಾಲೆಯ ಅಭ್ಯಾಸದ ಅವಧಿ ಮಾತ್ರ ಮೊಟಕಾಗಿ ಕಂಡಿತು. ಹೆಚ್ಚಿನ ಅಭ್ಯಾಸಕ್ಕಾಗಿ ಚಡಪಡಿಸತೊಡಗಿದರು. ಪಂಡಿತರ ಅಭ್ಯಾಸದ ಕಾತರ ಕಂಡವರಿಗೆ ಹುಚ್ಚು ಹಿಡಿಸಿತು.

ಆಗಿನ ಮುಂಬಯಿ ಪ್ರಾಂತದ ಚಿತ್ರಕಲಾ ಶಿಕ್ಷಣದ ವೀಕ್ಷಕರೂ ಸ್ವತಃ ಅಪ್ರತಿಮ

ಚಿತ್ರಕಲಾವಿದರೂ ಆದ ಸ್ವರ್ಗೀಯ ಡಿ.ಜಿ. ಬಡಿಗೇರ ಅವರು ಪಂಡಿತಜೀಯವರ ಅಭ್ಯಾಸದ ಹಾತೊರೆಯುವಿಕೆಯನ್ನು ಕಂಡು, ''ಪಂಡಿತರ ಹಸಿವು, ಕಲಾಭ್ಯಾಸದ ಪರಮೋಚ್ಚ ಮಹಾತ್ವಾಕಾಂಕ್ಷೆ ಜೆ.ಜೆ. ಕಲಾಶಾಲೆಯಲ್ಲಿ ಮಾತ್ರ ತೀರಲಾರದು'' ಎಂದುಕೊಂಡು ಮುಂಬಯಿಯಲ್ಲಿಯೇ ಮತ್ತೊಂದು ಕಲಾಶಾಲೆಯನ್ನು ನಡೆಸುತ್ತಿದ್ದ ಕನ್ನಡಿಗ ಜಿ.ಎಸ್.ದಂಡಾವತಿ ಮಠ ಅವರ ನೂತನ ಕಲಾಶಾಲೆಗೆ ಹೋಗಿ ಹೆಚ್ಚು ವೇಳೆ ಅಭ್ಯಾಸ ಮಾಡುವಂತೆ ಸೂಚಿಸಿ, ಅವರಿಗೆ ಅಲ್ಲಿ ಅಭ್ಯಾಸ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುವಂತೆ ದಂಡಾವತಿ ಮಠ ಅವರಿಗೆ ಒಂದು ಚೀಟಿಯನ್ನು ಬರೆದುಕೊಟ್ಟಿತು. ಈ ಕಾರಣವಾಗಿ ಪಂಡಿತರಿಗೆ ದಿನಕ್ಕೆ ಹದಿನೆಂಟು-ಇಪ್ಪತ್ತು ಗಂಟೆಗಳ ಕಾಲ ಅಭ್ಯಾಸ ಮಾಡಲು ಸಾಧ್ಯವಾಯಿತಲ್ಲದೇ ಕೆ.ಕೆ. ಹೆಬ್ಬಾರ್, ಎ.ಎ. ಅಲಮೇಲಕರ್, ಎಸ್.ಹೆಚ್. ರಾಝಾ ಮುಂತಾದ ವಿಶ್ವವಿಖ್ಯಾತ ಕಲಾವಿದರನ್ನು ತಯಾರು ಮಾಡಿದ ಕಲಾಗುರು ದಂಡಾವತಿ ಮಠ ಅವರ ದಿವ್ಯ ಮಾರ್ಗದರ್ಶನವೂ ದೊರೆಯಿತು.

ಎಪ್ಪತ್ತೆರಡು ಸಂವತ್ಸರಗಳನ್ನು ಕಂಡ ಈ ಕಲಾ ಮಹರ್ಷಿ ಪಂಡಿತಜೀ ಇಂದಿಗೂ ಹದಿನಾರು ಹದಿನೆಂಟು ಗಂಟೆಗಳ ಕಾಲ ತ್ರಿಪಾದದ ಮುಂದೆ ಕೈಯಲ್ಲಿ ಬಣ್ಣದ ತಟ್ಟೆ ಹಾಗೂ ಕುಂಚಗಳನ್ನು ಹಿಡಿದು ಕಲಾಕೃತಿಗಳ ನಿರ್ಮಾಣದಲ್ಲಿ ತೊಡಗಿರುತ್ತಾರೆ. ಅಂತೆಯೇ ಭಾರತೀಯ ಕಲಾಪ್ರಪಂಚದಲ್ಲಿ ಅದ್ಭುತ ಸಿದ್ಧಿಪುರುಷನೆಂದು ಇಂದು ಅಂತರಾಷ್ಟ್ರೀಯ ಮನ್ನಣೆಗೆ ಪಾತ್ರರಾಗಿ ನಿಂತ ಧೀಮಂತ ಕಲಾವಿದ; ಹೊಸಸೃಷ್ಟಿಯನ್ನು ನಿರ್ಮಾಣ ಮಾಡಬಲ್ಲ ಆಧುನಿಕ ವಿಶ್ವಾಮಿತ್ರ ಇಂದಿನ ಗಡ್ಡಧಾರಿ ಪಂಡಿತಜೀ.

ಜೆ.ಜೆ. ಕಲಾಶಾಲೆಯ ನಿರ್ದೇಶಕ ಗ್ಲ್ಯಾಡ್‌ಸ್ಟನ್ ಸೊಲೋಮನ್ ಅವರು ಎಸ್.ಎಂ.ಪಂಡಿತರಿಗೆ ಉತ್ತಮ ಮಾರ್ಗದರ್ಶಕರಾಗಿದ್ದರೂ, ಆ ಶಾಲೆಯ ಅಭ್ಯಾಸದ ದಿನಗಳಲ್ಲಿ ಪಂಡಿತರು ಕೆ.ಬಿ. ಚೂಡೇಕರ ಅವರಿಂದ ಹೆಚ್ಚು ಪ್ರಭಾವಿತರಾಗಿದ್ದರು.

''ಬಣ್ಣ, ಕುಂಚಗಳಿಂದ ಕ್ಯಾನ್‌ವಾಸ್ ಮೇಲೆ ಆಟವಾಡುತ್ತಿದ್ದ ಅದ್ಭುತ ಕಲಾವಿದ ಕೆ.ಬಿ.ಚೂಡೇಕರ ಆಯ್ದುಕೊಳ್ಳುತ್ತಿದ್ದ ವಸ್ತು, ವಸ್ತುವಿಗೆ ತಕ್ಕ ಬಣ್ಣಗಳನ್ನು ಬಳಸಿ ಚಿತ್ರ ಕಾವ್ಯವನ್ನು ಕ್ಯಾನ್‌ವಾಸ್ ಮೇಲೆ ಬರೆಯುತ್ತಿದ್ದ ಅವರ ವೈಶಿಷ್ಟ್ಯಪೂರ್ಣ ಶೈಲಿ ನಿಜಕ್ಕೂ ನಭೂತೋನ ಭವಿಷ್ಯತಿ'' ಎಂದು ಪಂಡಿತಜೀಯವರು ಇಂದಿಗೂ ತಮ್ಮ ಗುರು ಅವರನ್ನು ಜ್ಞಾಪಿಸಿಕೊಳ್ಳುತ್ತಾರೆ. ಚೂಡೇಕರ ಕುಂಚ ನಮ್ಮೆದುರು ಜೀವತಳೆದು ಕ್ಯಾನ್‌ವಾಸ್ ಮೇಲೆ ಕುಣಿದಾಡುತ್ತಿವೆಯೇನೋ ಎಂಬ ಭ್ರಮೆ ನಮಗೆ ಉಂಟಾಗುವಂತೆ ಭಾವುಕರಾಗಿ ಬಣ್ಣಿಸುತ್ತಾರೆ.

ಪಂಡಿತರ ಸಮಕಾಲೀನ ಕಲಾವಿದರಲ್ಲಿ ಇನ್ನೊಬ್ಬ ವಿಶ್ವವಿಖ್ಯಾತ ಕಲಾವಿದ ಕನ್ನಡಿಗ, ಕೆ.ಕೆ.ಹೆಬ್ಬಾರ್ ಮತ್ತು ಮಾಧವ ಸತ್ವಳೇಕರ ಅವರು ಪ್ರಮುಖರು. ಅವರಿಬ್ಬರೂ ಭಾರತೀಯ ಸಾಂಪ್ರದಾಯಿಕ ಕಲೆಯಿಂದ ಪ್ರಭಾವಿತರಾಗಿ ಕೃತಿ ರಚನೆಯಲ್ಲಿ ತೊಡಗಿದರೆ,

ಎಸ್.ಎಂ.ಪಂಡಿತ್ ಅವರು ಪಾಶ್ಚಿಮಾತ್ಯ ಶೈಲಿಯ ವಾಸ್ತವ ಚಿತ್ರಣ ಶೈಲಿಯನ್ನು ಆರಿಸಿಕೊಂಡವರು.

ಹೆಬ್ಬಾರ್ ಅವರು ಮುಂದೆ ಆಧುನಿಕ ಕಲಾಶೈಲಿಯ ಪ್ರಭಾವದಿಂದಾಗಿ ''ಭಾರತೀಯ ಕಲೆಯಲ್ಲೂ ಇಂದು ಬದಲಾವಣೆಯಾಗಬೇಕಾದುದು ಅಗತ್ಯವಾಗಿದೆ. ಅಜ್ಜ ನೆಟ್ಟ ಮರಕ್ಕೆ ನೇಣುಹಾಕಿಕೊಳ್ಳುವ ಹುಚ್ಚುತನವನ್ನು ಭಾರತೀಯ ಕಲಾವಿದ ಅವಶ್ಯವಾಗಿ ಬಿಡಬೇಕಾಗಿದೆ'' ಎಂಬ ನಿರ್ಧಾರದಿಂದ ಆಧುನಿಕ ಶೈಲಿಯ ಕಲಾಕೃತಿಗಳ ನಿರ್ಮಾಣದಿಂದ ಇಂದು ವಿಶ್ವವಿಖ್ಯಾತರಾಗಿರುವರಲ್ಲದೇ, ಇಂದಿನ ಭಾರತೀಯ ಪೀಳಿಗೆಯ ಯುವ ಕಲಾವಿದರಲ್ಲಿ ನವಚೈತನ್ಯವನ್ನು ತುಂಬಿ ಕಲಾಯುಗ ಪ್ರವರ್ತಕರೆಂಬ ಕೀರ್ತಿಗೆ ಕಾರಣರಾಗಿದ್ದಾರೆ.

ಎಸ್.ಎಂ. ಪಂಡಿತರು ಮಾತ್ರ ವಾಸ್ತವ ಶೈಲಿಯ ಕಲಾಕೃತಿಗಳ ರಚನೆಯನ್ನೇ ಮುಂದುವರಿಸಿಕೊಂಡು ಅದ್ಭುತ ಸಿದ್ಧಿಯನ್ನು ಸಾಧಿಸಿ ಹದಿನಾಲ್ಕು ಹದಿನೈದನೆಯ ಶತಮಾನಗಳಲ್ಲಿ ಆಗಿಹೋದ ಪ್ರಾಚೀನ ಪ್ರಭೃತಿಗಳು ಎಂದು ಕರೆಸಿಕೊಳ್ಳುವ ಯಾವುದೇ ಪಾಶ್ಚಿಮಾತ್ಯ ಕಲಾವಿದನಿಗೂ ಕಡಿಮೆಯಲ್ಲ ಎಂಬಂತೆ ಇಂದು ತಲೆ ಎತ್ತಿ ನಿಂತು ವಿಶ್ವವಿಖ್ಯಾತ ಕಲಾವಿದರ ಪಂಕ್ತಿಯಲ್ಲಿ ಸೇರಿದ ಕಲಾತಪಸ್ವಿ. ಪಂಡಿತ್ ಮತ್ತು ಕೆ.ಕೆ. ಹೆಬ್ಬಾರ್ ಅವರಿಬ್ಬರೂ ಆಧುನಿಕ ಕಲಾಶೈಲಿ ಮತ್ತು ಪಾಶ್ಚಿಮಾತ್ಯ ವಾಸ್ತವ ಶೈಲಿಗಳಲ್ಲಿ ಸಂಬಂಧವನ್ನು ಕಲ್ಪಿಸಿದ ಕೊಂಡಿಗಳಾಗಿದ್ದಾರೆ. ಎರಡೂ ಶೈಲಿಗಳಲ್ಲಿ ಭಾರತೀಯತೆಯ ಪರಮೋಚ್ಚ ಸಂಸ್ಕೃತಿಯನ್ನು ಮೆರೆಸಿದ್ದಾರೆ. ಇವರಿಬ್ಬರೂ ಇಂದು ಇಡೀ ವಿಶ್ವಕ್ಕೆ ಸೇರಿದವರಾಗಿದ್ದರೂ ''ಅವರು ಭಾರತೀಯರು, ಅವರು ಕನ್ನಡಿಗರು'' ಎಂಬ ಹೆಮ್ಮೆ ಕನ್ನಡಿಗರಾದ ನಮಗೆ !

ಪಂಡಿತಜೀಯವರು ಚಿತ್ರಿಸಿದ ಭಾವ ಅಥವಾ ವ್ಯಕ್ತಿ ಚಿತ್ರಗಳನ್ನು ಕಂಡ ವಿದೇಶಿಯರು ''ಎಸ್.ಎಂ. ಪಂಡಿತ್ ಭಾರತದ ರೆಂಬ್ರಾಂಡ್ಟ್'' ಎಂದೇ ಗುರುತಿಸುತ್ತಾರೆ. ಹೌದು, ಪಂಡಿತರಿಂದ ರಚಿಸಲ್ಪಟ್ಟ ವ್ಯಕ್ತಿ ಚಿತ್ರಗಳು ವಿಶ್ವವಿಖ್ಯಾತ. ಡಚ್ ಕಲಾವಿದ ರೆಂಬ್ರಾಡ್ಟ್‌ನ ವ್ಯಕ್ತಿಚಿತ್ರ ಕಲಾಕೃತಿಗಳಿಗೆ ಸರಿದೊರೆಯಾಗಿ ನಿಲ್ಲುತ್ತವೆ ಎಂಬ ಮಾತಿನಲ್ಲಿ ಎರಡಿಲ್ಲ. ಅವರ ಈ ಅನ್ಯಾದೃಶ ಕಲಾಸಿದ್ಧಿಗೆ ಇನ್ನೊಬ್ಬ ವಿದೇಶೀ ಕಲಾವಿದ ಬ್ಯಾಗ್ಡೋಟೊಪೆಲೀಸ್ ಅವರ ಪ್ರಭಾವವೂ ಕಾರಣವಾಗಿದೆ ಎಂದು ಸ್ವತಃ ಪಂಡಿತಜೀ ಒಪ್ಪಿಕೊಳ್ಳುತ್ತಾರಾದರೂ, ಈ ಸಿದ್ಧಿಯ ಹಿಂದೆ ಪಂಡಿತಜೀಯವರ ನಿರಂತರ ಸಾಧನೆ, ಸಮರ್ಪಣಾಭಾವ ಹಾಗೂ ತಪಸ್ಸು ಮುಖ್ಯ ಕಾರಣಗಳು. ಯಾವುದೇ ವಿಖ್ಯಾತ ಕಲಾವಿದನ ಪ್ರಭಾವಕ್ಕೆ ಪಂಡಿತರು ಮಣಿದಿದ್ದರೂ ಆ ಪ್ರಭಾವೀ ಕಲಾವಿದರನ್ನೇ ಅನುಕರಿಸಲು ಅವರು ಎಂದೂ ಮನಸ್ಸು ಮಾಡಲಿಲ್ಲ. ಬದಲಾಗಿ ತಮ್ಮದೇ ಆದ ಶೈಲಿಯೊಂದನ್ನು ಸೃಜಿಸಿದ ಸೃಜನಶೀಲ ಕಲಾವಿದ ಪಂಡಿತರು.

ಒಂದು ಕಲಾಕೃತಿಯನ್ನು ಕುರಿತು, ಈ ಕೃತಿ ನಿಮ್ಮಿಂದ ನಿರ್ಮಾಣಗೊಳ್ಳಲು ನೀವು ತೆಗೆದುಕೊಂಡ ವೇಳೆ ಎಷ್ಟು? ಎಂದು ಕೇಳಿದಾಗ, ಪಂಡಿತಜೀ ನಗುತ್ತ ಉತ್ತರಿಸುತ್ತಾರೆ.

''ಅರವತ್ತು ವರುಷಗಳು''.

ಒಂದು ಕಲಾಕೃತಿಯನ್ನು ಪೂರ್ಣಗೊಳಿಸಲು ನಿಜವಾಗಿಯೂ ಅವರು ತೆಗೆದುಕೊಳ್ಳುವ ಸಮಯ ನಲವತ್ತೆಂಟು ಗಂಟೆಗಳನ್ನು ಮೀರಲಾರದಾದರೂ ಅವರು ಹೇಳುವ ''ಅರವತ್ತು ವರ್ಷಗಳ ಸಮಯ'' ಎಂಬ ಮಾತಿನಲ್ಲಿ ಇರುವ ''ಅರವತ್ತು ವರ್ಷಗಳ ಸಾಧನೆ ಮತ್ತು ಅನುಭವಗಳು ಗಟ್ಟಿಗೊಂಡಾಗ ಮಾತ್ರ ಒಂದು ಪರಿಪೂರ್ಣ ಕಲಾಕೃತಿಯ ನಿರ್ಮಾಣ ಸಾಧ್ಯ''- ಎಂಬ ಮಾರ್ಮಿಕ ಅರ್ಥವನ್ನು ಗ್ರಹಿಸಬಹುದಾಗಿದೆ. ಈವರೆಗೆ ಮೂವತ್ತು-ನಲವತ್ತು ಸಾವಿರಕ್ಕೂ ಕಡಿಮೆಯಿಲ್ಲದ ಸಂಖ್ಯೆಯಲ್ಲಿ ನಿರ್ಮಾಣಗೊಂಡ ಅವರ ಕಲಾಕೃತಿಗಳೆಲ್ಲ ಪರಿಪೂರ್ಣ ಚೇತೋಹಾರಿ ಕೃತಿಗಳಾಗಿವೆ. ಒಂದೊಂದು ಕೃತಿಯೂ ಅನ್ಯಾದೃಶ, ಅಪೂರ್ವ.

ಆಗಿನ ಮುಂಬಯಿ ಪ್ರಾಂತದ ಅತ್ಯುನ್ನತ ವರ್ಣಕಲಾ ಪದವಿಯಾದ ಗೌವರ್ನಮೆಂಟ್ ಡಿಪ್ಲೊಮಾ ಪದವಿಯನ್ನು ಜೆ.ಜೆ. ಕಲಾಶಾಲೆಯಿಂದ ಕ್ರಿ.ಶ.1936ರಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಗಳಿಸಿದ ಎಸ್.ಎಂ. ಪಂಡಿತರಿಗೆ ಅದೇ ಕಲಾಶಾಲೆಯು ''ಫೆಲೋಷಿಪ್'' ಅನ್ನು ಕೊಟ್ಟು ಗೌರವಿಸಿದೆ.

ಜೆ.ಜೆ. ಕಲಾಶಾಲೆಯಿಂದ ಪದವೀಧರರಾಗಿ ಹೊರಬಂದ ಎಸ್.ಎಂ. ಪಂಡಿತರು ಪೋಸ್ಟರ್ ಡಿಝೈಯಿನ್‌ಗಳನ್ನು ಚಿತ್ರಿಸುವುದರೊಂದಿಗೆ ತಮ್ಮ ಕಲಾಜೀವನವನ್ನು ಪ್ರಾರಂಭಿಸಿದರು. ಈ ದಿಶೆಯಲ್ಲಿ ''ಭಾರತದಲ್ಲಿ ಪೋಸ್ಟರ್ ಕಲಾಕೃತಿಗಳನ್ನು ಪ್ರಾರಂಭಿಸಿದ ಪ್ರಪ್ರಥಮ ಕಲಾವಿದ'' ಎಂಬ ಶ್ರೇಯಸ್ಸು, ಕೀರ್ತಿ ಪಂಡಿತಜೀಯವರಿಗೆ ಲಭಿಸಿದವು. ಅಲ್ಲದೇ 'ಪೋಸ್ಟರ್ ವರ್ಣಗಳ ಬಳಕೆಯನ್ನೂ ಮೊಟ್ಟಮೊದಲಿಗೆ ಬೆಳಕಿಗೆ ತಂದ ಯಶಸ್ವಿಯ ಕಲಾವಿದನೆಂಬ ಪ್ರಶಂಸೆಗೂ ಅವರು ಪಾತ್ರರಾದರು. ಅವರ ''ಪೋಸ್ಟರ್ ಪ್ರಭುತ್ವವನ್ನು'' ಕಂಡು ಕೇಳಿದ ವಿಶ್ವವಿಖ್ಯಾತ ಚಲನಚಿತ್ರ ನಿರ್ಮಾಪಕ ಮೆಟ್ರೋ ಗೋಲ್ಡ್‌ವಿನ್ ಮೇಯರ್ (ಎಂ.ಜಿ.ಎಂ. ಪಿಕ್ಚರ್ಸ್ ಹಾಲಿವುಡ್) ಅವರು ತಮ್ಮ ಮುಂಬಯಿಯ ಸುಪ್ರಸಿದ್ಧ ''ಮೆಟ್ರೊ'' ಥಿಯೇಟರಿನಲ್ಲಿ ಬಿಡುಗಡೆಯಾಗುವ ಹೊಸ ಚಲನಚಿತ್ರಗಳ ಭಿತ್ತಿ ಪತ್ರಗಳಿಂದ ಥಿಯೇಟರನ್ನು ಅಲಂಕರಿಸಲು ಪಂಡಿತಜೀ ಅವರ ಸೇವೆಯನ್ನು ಪಡೆದುಕೊಂಡ ಕಾರಣವಾಗಿ ಎಂ.ಜಿ.ಎಂ. ಅವರಿಗಾಗಿ ಪೋಸ್ಟರ್ ಡಿಝೈಯಿನ್‌ಗಳನ್ನು ತಯಾರಿಸಿಕೊಟ್ಟ ಪ್ರಥಮ ಭಾರತೀಯ ಕಲಾವಿದನೆಂಬ ಹೆಗ್ಗಳಿಕೆ ಅವರದು. ಎಸ್.ಎಂ. ಸುಮಾರು ಕ್ರಿ.ಶ.1938ರಿಂದ ಹದಿಮೂರು ವರ್ಷಗಳ ಕಾಲ ಚಲನಚಿತ್ರ ಪ್ರಪಂಚಕ್ಕೆ ನೀಡಿದ ಕಾಣಿಕೆ ಅತ್ಯಮೋಘ.

ವರ್ಣ ಛಾಯ ಚಿತ್ರಣ (ಕಲರ್ ಫೋಟೋಗ್ರಫಿ)ದ ಅಸ್ತಿತ್ವವೇ ಇಲ್ಲದ ಆ ಕಾಲದಲ್ಲಿ ಚಲನಚಿತ್ರದ ನಟಿಯರನ್ನು ವಾಸ್ತವವಾಗಿ ಅವರಿರುವುದಕ್ಕಿಂತ ಹತ್ತುಪಟ್ಟು ಸುಂದರಿಯರಾಗಿ, ಲಾವಣ್ಯವತಿಯರಾಗಿ ಕಾಣುವಂತೆ ಪೋಸ್ಟರ್ ವರ್ಣಗಳಿಂದ ಚಿತ್ರಿಸುತ್ತಿದ್ದ ಪಂಡಿತರ ಪ್ರತಿಭೆಯ ಬೆಳಕು ಮುಂಬಯಿ ನಗರವನ್ನೆಲ್ಲ ವ್ಯಾಪಿಸಲು ತಡವಾಗಲಿಲ್ಲ. ಅವರ ಈ ಅಸದೃಶ

ಪ್ರತಿಭೆಯಿಂದ ಉತ್ತೇಜಿತರಾದ ಭಾರತದ ವಿಖ್ಯಾತ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರುಗಳು ತಮ್ಮ ಹೊಸ ಚಲನಚಿತ್ರಗಳ ಪ್ರಚಾರಕ್ಕಾಗಿ ಭಿತ್ತಿಪತ್ರಗಳ (ವಾಲ್‌ಪೋಸ್ಟರ್ಸ್) ಡಿಝೈನ್‌ಗಳನ್ನು ಪಂಡಿತರಿಂದ ಬರೆಸಿಕೊಳ್ಳಲು ಅವರ ಸುತ್ತಲೂ ಮುತ್ತಿಕೊಂಡರು. ಪಂಡಿತರ ದಿವ್ಯ ಕೈಚಳಕದಿಂದ ಮೂಡಿಬಂದ ಭಿತ್ತಿಪತ್ರಗಳಿಂದ ತಮ್ಮ ಚಲನಚಿತ್ರಗಳು ಹೆಚ್ಚು ಜನಾಕರ್ಷಕವಾಗುತ್ತವೆ ಎಂದು ತಮ್ಮ ಸರದಿಗಾಗಿ ಸಾಲುಗಟ್ಟಿ ನಿರೀಕ್ಷಣೆಗೈಯತೊಡಗಿದರು.

ಮುಂಬಯಿ ಸುಪ್ರಸಿದ್ಧ ಚಲನಚಿತ್ರ ಸ್ಟುಡಿಯೋಗಳಾದ ಪ್ರಭಾತ್, ರಾಜಕಮಲ್, ಕರ್ದಾರ್, ರಾಜಕಪೂರ್ ಸ್ಟುಡಿಯೋಗಳಿಗಾಗಿ ಪಂಡಿತರು ಚಿತ್ರಿಸಿಕೊಟ್ಟ ಭಿತ್ತಿಚಿತ್ರ ಕಲಾಕೃತಿಗಳು ಒಂದೊಂದೂ ಅಪ್ರತಿಮ. ಹೀಗಿದ್ದರೂ ಪಂಡಿತರ ಜೀವನ ಹೂವಿನ ಹಾಸಿಗೆಯಾಗಿರಲಿಲ್ಲ. ಅವರು ಕೇಳಿದಷ್ಟು ಹಣಕೊಟ್ಟು ಅವರ ಕಲಾಕೃತಿಗಳನ್ನು ಕೊಂಡುಕೊಳ್ಳುವ ಕಲಾಪ್ರೇಮಿಗಳಿದ್ದರೂ, ಆ ಕ್ಷೇತ್ರದಲ್ಲಿ ಅವರಿಗುಂಟಾದ ಈ ಅನುಭವಗಳನ್ನು ಅವರಿಂದಲೇ ಕೇಳಿ ತಿಳಿಯಬೇಕು.

''ಒಮ್ಮೆ ಭಾರತದ ಸುಪ್ರಸಿದ್ಧ ನಿರ್ಮಾಪಕ-ನಿರ್ದೇಶಕರಿಗಾಗಿ ನಾನು ಕೆಲವು ಕಲಾಕೃತಿಗಳನ್ನು ತಯಾರಿಸಿಕೊಟ್ಟು, ಚಿತ್ರಗಳು ಅಚ್ಚಾದಾಗ ಮೂಲಚಿತ್ರದಲ್ಲಿ ನಾನು ಕಾಣಿಸಿದ ನನ್ನ ಹೆಸರು ಮಾಯವಾಗಿತ್ತು. ಹತ್ತಿರ ಹೋಗಿ ನೋಡಿದಾಗ ಅದನ್ನು ಬಿಳಿಯ ಬಣ್ಣವನ್ನು ಬಳಿದು ಅಳಿಸಲಾಗಿತ್ತು ಎಂದು ತಿಳಿಯಿತು. ನನಗೆ ಆತ್ಮಾಭಿಮಾನ ಕೆರಳಿತು. ನೇರವಾಗಿ ಆ ನಿರ್ಮಾಪಕ ನಿರ್ದೇಶಕರ ಬಳಿಗೆ ಹೋಗಿ ನಾನು ಚಿತ್ರಿಸಿಕೊಟ್ಟ ಕಲಾಕೃತಿಗೆ ನೀವು ಹಣಕೊಟ್ಟಿರಬಹುದಾದ ಮಾತ್ರಕ್ಕೆ ಚಿತ್ರದಲ್ಲಿ ನಾನೇ ಹಾಕಿದ ನನ್ನ ಹೆಸರನ್ನು ಅಳಿಸಿ ಹಾಕುವ ಅಧಿಕಾರ ಖಂಡಿತ ನಿಮಗಿಲ್ಲ. ಚಿತ್ರ ಕೃತಿಯ ಸರ್ವಸ್ವಾಮ್ಯ ಕಲಾವಿದನದಾಗಿರುತ್ತದೆ. ನೀವೆಷ್ಟೇ ದೊಡ್ಡವರಾಗಿದ್ದರೂ ನಿಮ್ಮಂಥವರಿಗಾಗಿ ನಾನು ಇನ್ನು ಚಿತ್ರಿಸುವುದೂ ಇಲ್ಲ'' ಎಂದು ಹೇಳಿ ಬರಬೇಕಾಯಿತಲ್ಲದೆ ಅವರಿಗಾಗಿ ಮುಂದೆ ಒಂದು ಚಿತ್ರವನ್ನೂ ಚಿತ್ರಿಸಿಕೊಡಲಿಲ್ಲ.

''ಮತ್ತೊಬ್ಬ ಕಲಾವಿದರಿಗಾಗಿ ನಾನು ಕೆಲವು ದಿನ ಚಲನಚಿತ್ರ ಪ್ರಚಾರದ ಭಿತ್ತಿಪತ್ರಗಳನ್ನು ಚಿತ್ರಿಸಿಕೊಡುತ್ತಿದ್ದೆ. ಅವರು ನನಗೆ ಸಾಕಷ್ಟು ಪ್ರತಿಫಲವನ್ನೂ ಕೊಡುತ್ತಿದ್ದರು. ಈ ವಿಶ್ವಾಸದಿಂದಾಗಿ ನಾನು ಚಿತ್ರಿಸುತ್ತಿದ್ದ ಚಿತ್ರಗಳ ಮೇಲೆ ನನ್ನ ಹೆಸರು ಹಾಕುತ್ತಿರಲಿಲ್ಲ. ಹೀಗೆಯೇ ಕೆಲವು ದಿನಗಳು ಕಳೆದವು. ಆ ನನ್ನ ಮಿತ್ರರಿಗೆ ಯಾರೋ ಹೇಳಿದರಂತೆ:

''ಇಂಥವರಿಗಾಗಿ ನಾನು ಚಿತ್ರಗಳನ್ನು ಚಿತ್ರಿಸಿಕೊಡುತ್ತೇನೆ. ಆ ಚಿತ್ರಗಳಲ್ಲಿ ನನ್ನ ಹೆಸರು ಹಾಕುವುದಿಲ್ಲ, ಎಂದು ಪ್ರಚಾರ ಮಾಡಿಕೊಳ್ಳುತ್ತಲಿದ್ದಾನೆ'' ಎಂದು. ಆ ನನ್ನ ಮಿತ್ರರು ನನ್ನನ್ನು ಕರೆದು ನನಗಾಗಿ ನೀನು ಚಿತ್ರ ಮಾಡಿಕೊಡುತ್ತಿರುವುದಾಗಿ ನೀನು ಪ್ರಚಾರ ಮಾಡಿಕೊಳ್ಳುತ್ತಿರುವಿ. ಹೀಗೇಕೆ ಎಂದು ಕೇಳಿದರು.

''ನಾನೆಂದೂ ಹಾಗೆ ಮಾಡುವವನಲ್ಲ, ನಾನು ನಿಮ್ಮ ಉಪ್ಪು ಉಂಡವನು. ಯಾರೋ

ಆಗದ ಪಿಸುಣಿಗರು ನಮ್ಮ ಹಾಲಿನಂಥ ಸ್ನೇಹಕ್ಕೆ ಹುಳಿ ಬೆರೆಸಲು ನಿಮಗೆ ಹೇಳಿರಬೇಕು'' ಎಂದು ಹೇಳಿದೆ.

''ಇಲ್ಲ'' ಅವರೆಂದರು, ''ನೀನು ನಿಜಕ್ಕೂ ನನ್ನ ಅಪಪ್ರಚಾರ ಮಾಡುತ್ತಿರುವಿ ಎಂಬುದು ನನಗೆ ಖಂಡಿತವಾಗಿ ತಿಳಿದಿದೆ''

''ಸರಿ ಹಾಗಿದ್ದರೆ ನೀವು ನನಗೆ ಹಣಕೊಡುವುದೂ ಬೇಡ, ನಾನು ನಿಮಗಾಗಿ ಚಿತ್ರಿಸಿಕೊಡುವುದೂ ಬೇಡ'' ಎಂದು ಹೇಳಿ ಬಂದುಬಿಟ್ಟೆ. ನಂತರ ಅವರೆಷ್ಟು ನಮ್ರತೆಯಿಂದ ಕೇಳಿದರೂ ಅವರಿಗಾಗಿ ನಾನು ಚಿತ್ರಿಸಿಕೊಡಲಿಲ್ಲ. ಕ್ರಮೇಣ ಅವರ ಹೆಸರೂ ಆ ಕ್ಷೇತ್ರದಿಂದ ಮರೆಯಾಗಿ ಹೋಯಿತು. ಏಕೆಂದರೆ ಈ ಪ್ರಸಂಗದಿಂದ ಅವರಿಗೆ ಹುಚ್ಚು ಹಿಡಿದಿತ್ತು''.

ಇಂತಹ ಮಾನಸಿಕವಾಗಿ ಕ್ಷೋಭೆಗೊಳಗಾದ ಅನೇಕ ಪ್ರಸಂಗಗಳ ಕಹಿ ಅನುಭವಗಳ ಮುದ್ರೆ ಇದೆ ಪಂಡಿತಜೀಯವರ ನೆನಪಿನ ಸುರುಳಿಯಲ್ಲಿ.

ಹೌದು ಎಸ್.ಎಂ. ಪಂಡಿತ ಅವರದು ಯಾವಾಗಲೂ ಒಂದೇ ಮಾತು, ಒಂದೇ ನಡೆ. ಅವರು ಈವರೆಗೆ ತಮ್ಮ ಈ ವ್ಯಾಪಾರೀ ಕಲೆಯಲ್ಲಿ ಬಲು ಜಾಣ್ಮೆಯಿಂದ ವರ್ತಿಸುತ್ತ ಬಂದವರು. ಅವರ ವ್ಯವಹಾರ ಸರಳವೂ ಹೌದು, ಕಠಿಣವೂ ಹೌದು. ಇಂಥ ಜಾಣ್ಮೆಯ ವರ್ತಕರನ್ನು ಕಂಡೇ ಜಗಜ್ಯೋತಿ ಬಸವಣ್ಣನವರು ಕೂಡಲ ಸಂಗನೂ ಒಬ್ಬ ಜಾಣ ವ್ಯಾಪಾರಿ ಎಂದು ಹೇಳಲು,

''ಧರೆಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹದೇವಶೆಟ್ಟಿ. ಒಮ್ಮನವಾದರೆ ಒಡನೆ ನುಡಿವನು, ಇಮ್ಮನವಾದರೆ ನುಡಿಯನು, ಕಾಣಿಯ ಸೋಲ, ಕಾಣಿಯ ಗೆಲ್ಲ, ಬಲುಜಾಣ ನಮ್ಮ ಕೂಡಲಸಂಗಮದೇವ'' ಎಂಬ ವಚನವನ್ನು ಹೇಳಿರಬೇಕು.

ನಲವತ್ತರ ದಶಕದಲ್ಲಿ ಸುಪ್ರಸಿದ್ಧ ''ಫಿಲ್ಮ್ ಇಂಡಿಯಾ'' ಎಂಬ ಭಾರತದ ಏಕೈಕ ಚಲನಚಿತ್ರ ಮಾಸಪತ್ರಿಕೆಯು ಎಸ್.ಎಂ. ಪಂಡಿತರ ದಿವ್ಯ ಹಸ್ತದಿಂದ ಚಿತ್ರತವಾದ ಮುಖಪುಟ ಇಲ್ಲದೇ ಎಂದೂ ಹೊರಬರುತ್ತಿರಲಿಲ್ಲ. 1946ರ ''ಫಿಲ್ಮ್ ಇಂಡಿಯಾ'' ಪತ್ರಿಕೆಯ ಮುಖಪುಟದ ಮೇಲೆ ಅಚ್ಚಾದ ಒಂದು ಕಲಾಕೃತಿಯ ವಿನ್ಯಾಸದ ಕಲಾನೈಪುಣ್ಯವನ್ನು ಮೆಚ್ಚಿಕೊಂಡ ಕಾರಣ ಆ ಕಲಾಕೃತಿಯು ಕೆನಡಾ ದೇಶದ ಟೋರೊಂಟೋವಿನಲ್ಲಿ ಜರುಗಿದ ಅಂತರರಾಷ್ಟ್ರೀಯ ಪ್ರದರ್ಶನದಲ್ಲಿ ಪಂಡಿತಜೀಯವರಿಗೆ ಪ್ರಥಮ ಪ್ರಶಸ್ತಿಯನ್ನು ತಂದುಕೊಟ್ಟಿತು. ಶ್ರೀಯುತರು ಪ್ರಪ್ರಥಮವಾಗಿ ಕುಸುಮ ಕೇತಕರ್, ಪಾಠಾರೆ ಮುಂತಾದ ನಾಲ್ವರು ಸಹಪಾಠಿಗಳೊಂದಿಗೆ ವಾಣಿಜ್ಯ ಕಲೆಯನ್ನು ಪ್ರತಿನಿಧಿಸುವ ''ಭಾರತೀಯ ಯುವ ಕಲಾವಿದರ ಸಂಘ''ವೊಂದನ್ನು ಕಟ್ಟಿದ ಶ್ರೇಯಸ್ಸನ್ನೂ ಸಂಪಾದಿಸಿದವರಾಗಿದ್ದಾರೆ.

ಭಾರತದ ಸುಪ್ರಸಿದ್ಧ ಸಂಸ್ಕೃತಿಯ ಸಾಹಿತ್ಯದ ಮೇರುಕೃತಿಗಳೆಲ್ಲ ಭಾರತೀಯ ಚಿತ್ರ

ಕಲಾವಿದರ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದವಲ್ಲದೇ ಅವರ ಸೃಜನಶೀಲತೆಗೆ ಸ್ಫೂರ್ತಿಯನ್ನೂ ನೀಡಿವೆ. ಈ ಪರಿಣಾಮವಾಗಿ ಅನೇಕ ಕಲಾವಿದರು ಆ ಮಹಾಮೇರು ಕೃತಿಗಳಲ್ಲಿ ಅಡಕವಾದ ಮಹತ್ವಪೂರ್ಣ ಅರ್ಥವತ್ತಾದ ಸನ್ನಿವೇಶಗಳನ್ನೂ, ಘಟನೆಗಳನ್ನೂ ಸೌಂದರ್ಯಭರಿತ ಚಿತ್ರಕಲಾಕೃತಿಗಳಾಗಿ ಪರಿವರ್ತಿಸಿದರು. ''ಕವಿ ಶಬ್ದಗಳಿಂದ ಬಣ್ಣ ಬಳಿಯುತ್ತಾನೆ; ಚಿತ್ರಕಾರ ಬಣ್ಣಗಳಿಂದ ಹಾಡುತ್ತಾನೆ'' ಎಂಬಂತೆ ಹಿಂದಿನ ಕವಿಗಳ ಶಬ್ದಸೃಷ್ಟಿಯನ್ನು ಶಾಶ್ವತಗೊಳಿಸಲು ಚಿತ್ರಕಲೆಯ ಮುಖಾಂತರ ತಮ್ಮ ತಪಸ್ಸಿನ ಸತ್ವವನ್ನು ಧಾರೆಯೆರದರು. ಜಯದೇವ ಕವಿಯ ಶೃಂಗಾರಪೂರ್ಣ ಕೃತಿ - ''ಗೀತಗೋವಿಂದ''ದಿಂದ ಸ್ಫೂರ್ತಿಗೊಂಡು ಕಿರುವರ್ಣಚಿತ್ರಗಳಾಗಿ ರೂಪುಗೊಂಡ ರಜಪೂತ ಕಲಾಕೃತಿಗಳು ವಿಶ್ವಮಾನ್ಯವಾಗಿವೆ. ಅಂಥಹ ಮಹಾಮೇರು ಸಾಹಿತ್ಯ ಕಲಾಕೃತಿಗಳ ಪ್ರಭಾವದಿಂದ ಸ್ಫೂರ್ತಿಗೊಳ್ಳಲು ಎಸ್.ಎಂ. ಪಂಡಿತರೂ ಹೊರತಾಗಿಲ್ಲ.

ಜನ್ಮತಃ ದೈವಭೀರುವಾದ ಪಂಡಿತರು ಕಾಳಿಕಾಮಾತೆಯ ಪರಮಭಕ್ತರು. ''ನನ್ನ ಕಲಾಕೃತಿಗಳ ನಿರ್ಮಾಣಕ್ಕೆ ಅಗತ್ಯವಾದ ಸ್ಫೂರ್ತಿ, ಪ್ರೋತ್ಸಾಹಗಳಿಗೆ ಆ ಜಗನ್ಮಂಗಲೆ ಮಹಾಮಾತೆ - ಕಾಳಿಕಾದೇವಿಯ ಪ್ರೇರಣೆಯೇ ಮುಖ್ಯವಾಗಿದೆ'' ಎಂದು ನಂಬಿದ ಪಂಡಿತಜೀ ಗುಲಬರ್ಗಾದಲ್ಲಿ 1956ರಲ್ಲಿ ಕಾಳಿಕಾಮಾತೆಗಾಗಿ ಒಂದು ದೇವಾಲಯವನ್ನೂ ಸ್ವತಃ ಕಟ್ಟಿಸಿ, ದೇವತೆಯ ಪೂಜೆ ಪುನಸ್ಕಾರಗಳೆಲ್ಲ ಸಾಂಗೋಪಾಂಗವಾಗಿ ನಡೆದುಬರಲು ವ್ಯವಸ್ಥೆಯನ್ನೂ ಮಾಡಿರುವರಲ್ಲದೇ, ಈಗ ಸಂಪೂರ್ಣ ದೇವಾಲಯವನ್ನು ಅಮೃತಶಿಲೆಯ ಹೊದಿಕೆಯಿಂದ ಅಲಂಕರಿಸಿ, ಗೋಪುರ ಮಹಾದ್ವಾರಗಳನ್ನು ಕಲಾಪೂರ್ಣವಾಗಿ ಜೋಡಿಸುವ ಯೋಜನೆಯಿಂದ ಕಾರ್ಯಪ್ರವೃತ್ತರಾಗಿದ್ದಾರೆ. ಈಗ ತಮಗೆ ದೊರೆಯುವ ಸಂಪಾದನೆಯನ್ನೆಲ್ಲಾ ಕಾಳಿಕಾದೇವಿ ಮಂದಿರಕ್ಕಾಗಿ ವಿನಿಯೋಗಿಸುತ್ತಿದ್ದಾರೆ.

ಯಾವುದೇ ಒಂದು ಕಲಾಕೃತಿಯ ಮಾನಸಿಕ ಚಿತ್ರಣ ನಿಮಗೆ ಹೇಗೆ ಗೋಚರಿಸುತ್ತದೆ? ಯಾವ ಸ್ಫೂರ್ತಿಯಿಂದ ನೀವು ಕಲಾಕೃತಿಗಳನ್ನು ನಿರ್ಮಿಸುತ್ತೀರಿ ಎಂಬ ಪ್ರಶ್ನೆಗೆ - ''ಕಲಾಕೃತಿಗಳನ್ನು ನಾನು ನಿರ್ಮಿಸುವುದೂ ಇಲ್ಲ, ಕಲಾಕೃತಿಗಾಗಿ ಚಿಂತನೆಯನ್ನೂ ಮಾಡುವುದಿಲ್ಲ. ನಟ್ಟ ನಡುರಾತ್ರಿಯಲ್ಲಿ ಇದ್ದಕ್ಕಿದ್ದಂತೆ ಯಾವುದೊ ಸನ್ನಿವೇಶದ ಚಿತ್ರವೊಂದು ರೂಪುತಳೆದು ನನ್ನ ಕಣ್ಣೆದುರು ನಿಲ್ಲುತ್ತದೆ. ಆಗ ನಾನು ನೇರವಾಗಿ ಕ್ಯಾನ್‌ವಾಸ್ ಬಳಿಗೆ ಹೋಗುತ್ತೇನೆ. ನನ್ನ ಕಣ್ಣೆದುರಿಗಿರುವ ಚಿತ್ರವನ್ನು ಚಾಚೂ ತಪ್ಪದಂತೆ ಚಿತ್ರಿಸಿಬಿಡುತ್ತೇನೆ. ನಾನೇನು ಚಿತ್ರಿಸಿದ್ದೇನೆ ಎಂದು ಮರುದಿನ ನನಗೆ ತಿಳಿಯುತ್ತದೆ. ನನಗೆ ಈ ಅನುಭವ ಅನೇಕಬಾರಿಯಾಗಿದೆ. ಹೀಗಾಗಲು ಸ್ವತಃ ಆ ಜಗನ್ಮಾತೆ ಕಾಳಿಕಾದೇವಿಯೇ ನನ್ನ ಕೈಹಿಡಿದು ಚಿತ್ರ ಬರೆಸುತ್ತಾಳೆ ಎಂದು ಹೇಳದೇ ಇರಲು ಹೇಗೆ ಸಾಧ್ಯ?'' ಎಂಬ ಮರು ಪ್ರಶ್ನೆ ಅವರ ಬಾಯಿಂದ ಹೊರಬರುತ್ತದೆ.

''ವೀರ ನಾರಾಯಣನೇ ಕವಿ, ಲಿಪಿಕಾರ ಕುಮಾರವ್ಯಾಸ'' ಎಂದು ಸರ್ವಸ್ವವನ್ನೂ

ಶ್ರೀಮನ್ನಾರಾಯಣನಿಗೇ ಒಪ್ಪಿಸಿಬಿಡುವ "ಕರ್ನಾಟ ಭಾರತ ಕಥಾಮಂಜರಿಯ" ಕರ್ತೃ ಗದುಗಿನ ಕುಮಾರವ್ಯಾಸನನ್ನು ನೆನಪಿಸಿಕೊಡುತ್ತಾರೆ. ತನ್ನ ಸರ್ವಸ್ವವೆಲ್ಲ ಕಾಳಿಕಾಮಾತೆಗೆ ಮಾತ್ರ ಸೇರಿದ್ದು ಎಂದು ಹೇಳುತ್ತಾರೆ ಪಂಡಿತಜೀ.

ಎಸ್.ಎಂ. ಪಂಡಿತರ ಕ್ರಿಯಾಶೀಲ ತಂತ್ರಸಿದ್ಧಿಯ, ವರ್ಣವಿನ್ಯಾಸದ ಲಾಲಿತ್ಯ ಕುಂಚದ ಸೆಳೆತಗಳಲ್ಲಿರುವ ಅದ್ಭುತ ಪ್ರಭುತ್ವ, ಲಾವಣ್ಯಮಯಸೃಷ್ಟಿ ಸೌಂದರ್ಯದ ಚಿತ್ರಣ ವೈಭವಗಳು ನೋಡುಗನನ್ನು ಮಂತ್ರ ಮುಗ್ಧನನ್ನಾಗಿ ಮಾಡುತ್ತದೆ. ಅಭಿವ್ಯಕ್ತಿಸಲು ಅಸಾಧ್ಯವಾದ ಅನುಪಮ ಹೊಸಲೋಕಕ್ಕೆ ಎಳೆದೊಯ್ಯುತ್ತವೆ. ಭಕ್ತಿಯ ತನ್ಮಯತೆಯಿಂದ ರೋಮಾಂಚನಗೊಳ್ಳುವಂತೆ ಮಾಡುತ್ತವೆ. ಭಾರತೀಯ ಮಹೋನ್ನತ ಸಂಸ್ಕೃತಿಯ ಘನತೆಯನ್ನೇ ಪುನರುತ್ಥಾನಗೊಳಿಸಿದಂತೆ.

ತಮ್ಮ ಭವ್ಯ ಚಿತ್ರಕಲಾಕೃತಿಗಳ ಸೃಷ್ಟಿಯಲ್ಲಿ ಪಂಡಿತರು ತಮ್ಮ ತಪೋತೇಜವನ್ನೆಲ್ಲಾ ಧಾರೆಯೆರೆದಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ - ಬಾಣನ 'ಕಾದಂಬರಿ', ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ಹಾಗೂ 'ಕುಮಾರ ಸಂಭವಾ'ದಿ ಮಹಾಕಾವ್ಯಗಳ ಸತ್ವಭರಿತ ಸನ್ನಿವೇಶಗಳಲ್ಲಿ ಯಾವ ಒಂದು ಘಟನೆಯೂ ಪಂಡಿತರ ಅನ್ವೇಷಕ ಕಣ್ಣುಗಳ ತೀಕ್ಷ್ಣ ದೃಷ್ಟಿಯಿಂದ ತಪ್ಪಿಸಿಕೊಂಡಿಲ್ಲ.

ಶಕುಂತಲೆಯ ಪತ್ರಲೇಖನ, ವಿಶ್ವಾಮಿತ್ರ-ಮೇನಕಾ, ಊರ್ವಶಿ, ವಿಶ್ವಾಮಿತ್ರ-ಮೇನಕೆಯರ ಸಲ್ಲಾಪ, ವಿಶ್ವಾಮಿತ್ರನ ತಪೋಭಂಗ, ದುಷ್ಯಂತ-ಶಕುಂತಲೆ, ಪುಂಡರೀಕ-ಮಹಾಶ್ವೇತೆ, ನಳ-ದಮಯಂತಿ, ಸೀತಾಪಹರಣ, ಸೀತಾಸ್ವಯಂವರ, ಭರತ ಪಾದುಕಾ ಸಂಭಾವನೆ, ಹನುಮಂತ ದೌತ್ಯ, ಕರ್ಣಾರ್ಜುನರ ಯುದ್ಧ ಬುದ್ಧ-ವಾಸವದತ್ತಾ ಬುದ್ಧ-ಸುಜಾತ, ನಾಗರ-ಸುಂದರಿ-ಉಪಗುಪ್ತ ಅಲ್ಲದೇ ರಾಧಾ-ಕೃಷ್ಣರ ಅನಂತ ಲೀಲೆಗಳ, ಶಿವಲೀಲೆಗಳ, ಶಾರದೆ-ವಿಘ್ನೇಶ್ವರರ ಅಸಂಖ್ಯಾತ ಚಿತ್ರಗಳು ಒಂದೇ ಎರಡೇ ಪಂಡಿತರ ದೈವಾಂಶ ಸಂಭೂತ-ಕರಗಳಿಂದ ಮೂಡಿಬಂದ ಕಲಾಕೃತಿಗಳು! ಕಾಳಿಕಾ ಮಾತೆಯನ್ನು ಎಷ್ಟು ವಿಧದಲ್ಲಿ ಚಿತ್ರಿಸಿದರೂ ಅವರಿಗೆ ತೃಪ್ತಿಯಿಲ್ಲ. ನೈಜ ಕಲಾವಿದನಿಗಿರಬೇಕಾದ ದಿವ್ಯ ಅತೃಪ್ತಿ ಪಂಡಿತರನ್ನು ಆವರಿಸಿಕೊಂಡಿದೆ. ಅವರು ತಮ್ಮ ಯಾವುದೇ ದುಡಿಮೆ; ಬ್ರಹ್ಮಾನಂದ ಸಂಪಾದನೆಯ ಸಂಕಲ್ಪ, ಅವರ ಎಲ್ಲ ಕೃತಿಗಳಲ್ಲಿಯೂ ವ್ಯಕ್ತವಾದ ಚಿತ್ತಾಕರ್ಷಕ ವರ್ಣ ಸಂಯೋಜನೆ, ವಸ್ತು ಸಂವಿಧಾನ, ಪ್ರಕೃತಿಯ ಭವ್ಯ-ರಮ್ಯ ಸಂಯೋಜನೆ, ಅಭಿವ್ಯಕ್ತಿಯ ಶ್ರೀಮಂತಿಕೆ, ಸೂಕ್ಷ್ಮಾತಿಸೂಕ್ಷ್ಮವೂ, ತೀಕ್ಷ್ಣವೂ ಆದ ಪರಿಶೀಲನೆಗಳು ಪಂಡಿತರ ವ್ಯಕ್ತಿತ್ವವನ್ನು ಇನ್ನೂ ಎತ್ತರಕ್ಕೆ ಒಯ್ದಿವೆ.

ಪಂಡಿತರಿಂದ ರಚಿತವಾದ ಅನೇಕ ಕಲಾಕೃತಿಗಳನ್ನು ಖಟಾವು, ಮಫತಲಾಲ ಮುಂತಾದ ವ್ಯಾಪಾರೀ ಸಂಸ್ಥೆಗಳವರು ತಮ್ಮ ಬಟ್ಟೆಗಳ ಪ್ರಚಾರಕ್ಕಾಗಿ, ರೈಲ್ವೆ ಭಿತ್ತಿಪತ್ರಗಳಿಗಾಗಿ ಬಳಸಿಕೊಂಡ ಪರಿಣಾಮವಾಗಿ ಹಿಂದೊಮ್ಮೆ ಭಾರತದ ರೈಲು ನಿಲ್ದಾಣಗಳೆಲ್ಲ ಪಂಡಿತರ ಭಿತ್ತಿಪತ್ರಗಳಿಂದ

ಅಲಂಕೃತಗೊಂಡಿದ್ದವು. ಅವರ ಭಿತ್ತಿಪತ್ರ ಕಲಾಕೃತಿಗಳನ್ನು ಕಂಡವರು ಅವರ ಕೃತಿಗಳನ್ನು ವಿಶ್ವವಿಖ್ಯಾತ, ವಾಣಿಜ್ಯ ಕಲಾವಿದ 'ಟೂಲೂಸ್ ಲಾಟ್ರೇಕ್' ಅವರ ಕಲಾಕೃತಿಗಳಿಗೆ ಹೋಲಿಸುತ್ತಾರೆ.

ಭಾವುಕರಾದ ಪಂಡಿತರು ದೈವೀಶಕ್ತಿಯ ಪ್ರೇರಣೆಯಿಂದಲೇ ತನ್ನಿಂದ ಕಲಾಕೃತಿಗಳ ನಿರ್ಮಾಣವಾಗುತ್ತದೆ ಎಂದು ಹೇಳುತ್ತಿದ್ದರೂ, ಆಧ್ಯಾತ್ಮಿಕ ಸಂಸ್ಕೃತಿಯ ಪ್ರೇರಣೆಯ ಸ್ಫೂರ್ತಿಲಹರಿಯು ಅತ್ಯಧಿಕವಾಗಿ ಹೊರಹೊಮ್ಮಿ ಅವರ ಕಣ್ಮನಗಳೆದುರಿಗೆ ಉಜ್ವಲವಾದ ಸುಂದರ ಚಿತ್ರಗಳ ಸರಣಿಯೇ ನಿಲ್ಲುತ್ತಿರಬೇಕು; ಭವ್ಯವಾದ ಕಲ್ಪನಾ ಸಾಮರ್ಥ್ಯ, ಅವ್ಯಾಹತವಾಗಿ ಬೇಕಾದಾಗ ಒದಗಿನಿಲ್ಲುವಂತೆ ಅವರಲ್ಲಿ ಸರ್ವದಾ ಉದ್ದೀಪಿತವಾಗಿರಬೇಕು. ಎಂಬುದನ್ನು ಅವರ ಭಾವಪೂರ್ಣ ಲಾಲಿತ್ಯಮಯ ಕಲಾಕೃತಿಗಳೇ ಸೂಚಿಸುತ್ತವೆ. ಹೀಗೆ ಅವರಿಂದ ಪೌರಾಣಿಕ ಹಿನ್ನಲೆಯಲ್ಲಿ ಚಲನಚಿತ್ರಗಳಿಗಾಗಿ ನಿರ್ಮಿತವಾದ ಅನೇಕ ಕಲಾಕೃತಿಗಳನ್ನು ವಾಣಿಜ್ಯ ಪ್ರಪಂಚವು ಕ್ಯಾಲೆಂಡರುಗಳನ್ನಾಗಿ ಪರಿವರ್ತಿಸಿಕೊಂಡಿತು.

ಈ ಪರಿಣಾಮವಾಗಿ ಭಾರತದೇಶದ ಲಕ್ಷಾಂತರ ಮನೆಮನೆಗಳ ಗೋಡೆಗಳ ಮೇಲೆ ಪಂಡಿತರ ಕ್ಯಾಲೆಂಡರ್ ಕೃತಿಗಳು ಅಲಂಕಾರಗೊಂಡವು. ಪ್ರಚಾರ ಪ್ರತಿಷ್ಠೆಗಳನ್ನು ಎಂದೂ ಬಯಸದ ಪಂಡಿತರು ಭಾರತ ದೇಶದ ಯಾವುದೇ ಭಾಗದಲ್ಲಿಯೂ ಈವರೆಗೆ ತಮ್ಮ ಕಲಾಕೃತಿಗಳ ಏಕವ್ಯಕ್ತಿ ಪ್ರದರ್ಶನ ಮಾಡಿ ಪತ್ರಿಕಾ ಪ್ರಶಂಸೆಯ ಪ್ರತಿಷ್ಠೆಯನ್ನು ಬೆಳೆಸಿಕೊಂಡಿಲ್ಲವಾದ ಕಾರಣವಾಗಿ, ಅವರ ಕೃತಿಗಳನ್ನು ಮೆಚ್ಚಿ ತಮ್ಮ ಮನೆಯ ಗೋಡೆಗಳನ್ನು ಅಲಂಕೃತಗೊಳಿಸಿಕೊಳ್ಳುವ ಲಕ್ಷಾಂತರ ಕಲಾಪ್ರೇಮಿಗಳಿಗೆ ಎಸ್.ಎಂ. ಪಂಡಿತರನ್ನೂ ಅವರ ಮೂಲಕೃತಿಗಳನ್ನೂ ನೋಡಲು ಈವರೆಗೆ ಸಾಧ್ಯವಾಗಿಲ್ಲ. ಆದರೆ ಅವರ ಈ ಕ್ಯಾಲೆಂಡರ್ ಕಲೆಯು ಏಕಮೇವಾದ್ವಿತೀಯವಾಗಿ ಅನೇಕಾನೇಕ ಉದಯೋನ್ಮುಖ ಕಲಾವಿದರಿಗೆ ಪ್ರೇರಕ ಶಕ್ತಿಯಾಗಿ ಪರಿಣಮಿಸಿದೆ. ಮುಳಗಾಂವಕರರಂಥ ಪ್ರತಿಭಾಶಾಲಿ ವಾಣಿಜ್ಯ ಕಲಾವಿದರನ್ನು ಬೆಳಕಿಗೆ ತಂದ ಶ್ರೇಯಸ್ಸು ಪಂಡಿತರದು. ದ್ರೋಣಾಚಾರ್ಯರ ಮಣ್ಣಿನ ಪ್ರತಿಮೆಯನ್ನು ಎದುರಿಗಿಟ್ಟುಕೊಂಡು ಏಕಲವ್ಯನು ಬಿಲ್ಲುವಿದ್ಯೆಯನ್ನು ಕಲಿತಂತೆ, ಪಂಡಿತರ ಕಲಾಕೃತಿಗಳನ್ನು ಎದುರಿಗಿಟ್ಟುಕೊಂಡು, ಕೇವಲ ಕಲ್ಪನೆಯ ಪಂಡಿತರ ಪ್ರತಿಮೆಯನ್ನು ಗುರುವೆಂದು ನೆನೆಸಿಕೊಂಡು ಕಲಾಕೃತಿ ನಿರ್ಮಾಣ, ಕಲಾಭ್ಯಾಸವನ್ನು ಮಾಡುತ್ತಿರುವವರ ನಿದರ್ಶನಗಳೂ ಕಡಿಮೆ ಇಲ್ಲ.

''ವಾಣಿಜ್ಯೋದ್ದೇಶಗಳಿಗಾಗಿ ಚಿತ್ರಿಸುವ ಕಲಾವಿದನೂ ಪರಿಪೂರ್ಣ ಸೃಜನಾತ್ಮಕ ಕಲಾಕೃತಿಗಳನ್ನು ನಿರ್ಮಿಸಬಲ್ಲ'' ಎಂಬುದನ್ನು ಕಂಡುಕೊಳ್ಳಲು ಪಂಡಿತರ ಕಲಾಕೃತಿಗಳನ್ನು ಅವಶ್ಯವಾಗಿ ನೋಡಬೇಕು. ''ಕ್ಯಾಲೆಂಡರ್ ಕಲಾವಿದ'' ಎಂಬ ಉಪೇಕ್ಷೆಯ ಮನೋಭಾವನೆಯಿಂದ ಅವರ ಕಲಾಕೃತಿಗಳನ್ನು ನೋಡುವವರು ಖಂಡತವಾಗಿಯೂ ಪಂಡಿತರನ್ನು ಅರ್ಥಮಾಡಿಕೊಳ್ಳಲಾರರು. ಪಂಡಿತರನ್ನೂ ಅವರ ಕಲಾಕೃತಿಗಳನ್ನೂ

ಅರ್ಥಮಾಡಿಕೊಳ್ಳಬೇಕೆನ್ನುವವರಿಗೆ ಚಿತ್ತಸ್ವಾಸ್ಥ್ಯವೂ, ಚಿತ್ತಶುದ್ಧಿಯೂ ಇರಬೇಕಾದುದು ಅಗತ್ಯ.

ಎಸ್.ಎಂ. ಪಂಡಿತರು ಸಾವಿರಾರು ವ್ಯಕ್ತಿಗಳನ್ನು ಚಿತ್ರಿಸಿದ್ದಾರೆ. ಜಲವರ್ಣ, ತೈಲವರ್ಣಗಳೆರಡೂ ಮಾಧ್ಯಮಗಳಲ್ಲಿ ಅದ್ವಿತೀಯ ಸಿದ್ಧಿಯನ್ನು ಸಾಧಿಸಿದ ಶ್ರೀಯುತರಿಂದ ರಚಿತವಾದ ಅನೇಕ ವ್ಯಕ್ತಿಚಿತ್ರಗಳು ವೈಭವೋಪೇತ ವರ್ಣಚಿತ್ರಗಳಾಗಿವೆ. ಕನ್ಯಾಕುಮಾರಿಯಲ್ಲಿರುವ ಆಳೆತ್ತರದ ಸ್ವಾಮಿ ವಿವೇಕಾನಂದರ ಭವ್ಯ ತೈಲಚಿತ್ರ ಪಂಡಿತರ ಕಲಾವೈಖರಿಯನ್ನು ಪ್ರತಿನಿಧಿಸುವ ಪ್ರತ್ಯಕ್ಷ ನಿದರ್ಶನ. ಈ ಚಿತ್ರದ ಪ್ರಾರಂಭದಿಂದ ಪೂರ್ಣಗೊಳ್ಳುವವರೆಗೆ ಅವರು ಉಪವಾಸ ವ್ರತಾಚರಣೆಯನ್ನು ಮಾಡಬೇಕಾಯಿತು.

''ಸ್ವಾಮಿ ವಿವೇಕಾನಂದರದು ತೇಜೋಮಯ ವ್ಯಕ್ತಿತ್ವ, ಲೌಕಿಕರನ್ನು ಮೀರಿ ಬೆಳೆದು ನಿಂತ ಸ್ವಾಮೀಜಿಯವರ ಎತ್ತರದ ನಿಲುವು, ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿ ಕೊರೆಯುತ್ತಿದ್ದ ಪ್ರಪಂಚದ ಭವಿಷ್ಯದ ಚಿಂತನೆ, ತನ್ಮೂಲಕ ಪ್ರಪಂಚದ ಒಳಿತಿಗಾಗಿ 'ನಾನು ಏನನ್ನಾದರೂ ಸಾಧಿಸಬಲ್ಲೆ'ನೆಂಬ ಮನೋಸ್ಥೈರ್ಯಗಳು ಈ ಚಿತ್ರದಲ್ಲಿ ಸ್ವಾಮೀಜಿಯವರ ವ್ಯಕ್ತಿತ್ವಕ್ಕೆ ಧಕ್ಕೆ ಬರದಂತೆ ಯಥಾವತ್ತಾಗಿ ಮೂಡಿಬರಲು ನಾನು ಉಪವಾಸ ವ್ರತವನ್ನು ಆಚರಿಸುವುದು ಅಗತ್ಯವಾಗಿತ್ತು'' ಎಂದು ಹೇಳುತ್ತಾರೆ ಪಂಡಿತ್‌ಜೀ.

ಕನ್ಯಾಕುಮಾರಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಸ್ವಾಮಿ ವಿವೇಕಾನಂದರ ಭವ್ಯ ವಿಗ್ರಹದ ಶಿಲ್ಪಿ ಸೋನಾವದೇಕರ್ ಅವರಿಗೆ ಈ ತೈಲಚಿತ್ರವೇ ರೂಪದರ್ಶಿಯಾಯಿತು ಎಂಬುದು ಗಮನಾರ್ಹ.

ಮುಂಬಯಿನ ನ್ಯೂಕೌನ್ಸಿಲ್ ಹಾಲ್‌ನಲ್ಲಿರುವ ಮಹಾತ್ಮಾ ಗಾಂಧೀಜಿ, ಇಂಡಿಯನ್ ಹೈಕಮಿಷನ್ ಹಾಗೂ ಲಂಡನ್ನಿನ ಕಾಮನ್‌ವೆಲ್ತ್ ಸಂಸ್ಥೆಗಳಲ್ಲಿ ರಾರಾಜಿಸುತ್ತಿರುವ ಹೈಕಮಿಷನರ್ ಎಸ್.ಜಿ. ಗೋರೆ, ಭಾರತದ ದಿವಂಗತ ಪ್ರಧಾನಿ ಇಂದಿರಾಗಾಂಧಿ, ಬ್ರಿಟೀಷ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಅವರುಗಳ ಭಾವಚಿತ್ರಗಳು ಪಂಡಿತರ ವ್ಯಕ್ತಿ ಚಿತ್ರಣ ವೈಭವವನ್ನು ಮೆರೆಯುವ ಶ್ರೇಷ್ಠ ಕಲಾಕೃತಿಗಳಾಗಿವೆ. ಭಾರತೀಯ ಭಾವಚಿತ್ರ ಕಲಾವಿದರ ಸಾಲಿನಲ್ಲಿ ಅಗ್ರಸ್ಥಾನ ಪಡೆದ ಎಸ್.ಎಂ. ಪಂಡಿತ್ ಅವರನ್ನು ಕ್ರಿ.ಶ.1982ರಲ್ಲಿ ಇರಾಕ್ ಅಧ್ಯಕ್ಷರಾದ ಸದ್ದಾಮ್ ಹುಸೇನ್ ಅವರ ಭಾವಚಿತ್ರ ರಚನೆಗಾಗಿ ವಿಶೇಷ ಆಮಂತ್ರಣದಿಂದ ರಚಿಸಿಕೊಳ್ಳಲಾಯಿತು. ಲಂಡನ್ನಿನ ಆಂಥೋನಿ ಮಾಸ್ಕರೆನ್‌ಹಾಸ್, ಸಂಡೇ ಟೈಮ್ಸ್ ಪತ್ರಕರ್ತರು, ಕಲಾಗುರು ದಂಡಾವತಿ ಮಠ, ಕರ್ನಾಟಕ ರಾಜ್ಯ ನಿರ್ಮಾಣದ ಅಧ್ವರ್ಯು ಹಾಗೂ ಜನಪ್ರಿಯ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಮುಂತಾದವರ ವ್ಯಕ್ತಿಚಿತ್ರಗಳೂ, ಸ್ವತಃ ಪಂಡಿತಜೀಯವರ ಪುತ್ರಿಯರ, ಸ್ನೇಹಿತರ ಅಸಂಖ್ಯಾತ ವ್ಯಕ್ತಿ ಚಿತ್ರಗಳೇ ಮೊದಲಾದವುಗಳಲ್ಲಿ ಅಡಗಿರುವ ಅನ್ಯಾದೃಶ ಕಲಾವಂತಿಕೆಯನ್ನು ನೋಡಿಯೇ ಕಂಡುಕೊಳ್ಳಬೇಕು.

ಸನ್ 1978ರಲ್ಲಿ ದಿ ಇಂಡಿಯನ್ ಹೈಕಮಿಷನ್, ಲಂಡನ್ ಹಾಗೂ ಮಾಂಚೆಸ್ಟರ್‌ಗಳಲ್ಲಿ ಜರುಗಿದ ಇವರ ಪೌರಾಣಿಕ, ಇತಿಹಾಸಿಕ, ಕಾವ್ಯಗಳಿಂದ ಮೂಡಿಬಂದ ಮತ್ತು ವ್ಯಕ್ತಿಚಿತ್ರಗಳ ಪ್ರದರ್ಶನದ ವೇಳೆಯಲ್ಲಿ ಪಂಡಿತರನ್ನು ಸನ್ಮಾನಿಸಲಾಯಿತಲ್ಲದೇ, ಅವರ ಕಲಾಕೃತಿಗಳನ್ನು ಕಂಡ ವಿದೇಶೀ ಕಲಾ ವಿಮರ್ಶಕರು ಪಂಡಿತಜೀಯವರ ಅನ್ಯಾದೃಶ ಕಲಾವಂತಿಕೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. 1978ರ ಈ ಪ್ರದರ್ಶನವೇ ಪಂಡಿತರಿಗೆ ಜಗತ್ತಿನಾದ್ಯಂತ ಉನ್ನತವಾದ ಕೀರ್ತಿಯನ್ನೂ ಅಂತರಾಷ್ಟ್ರೀಯ ಮನ್ನಣೆಯನ್ನೂ ತಂದುಕೊಟ್ಟಿತು. ಪರಿಣಾಮವಾಗಿ ಲಂಡನ್ನಿನ ರಾಯಲ್ ಸೊಸೈಟಿ ಆಫ್ ಆರ್ಟ್ಸ್ ಸಂಸ್ಥೆಯು ಫೆಲೋಷಿಪ್ ನೀಡಿ ಎಸ್.ಎಂ. ಪಂಡಿತರನ್ನು ಗೌರವಿಸಿತು. ಈ ಪ್ರದರ್ಶನವೇ ಪ್ರಾಯಶಃ ಪಂಡಿತರ ಪ್ರಥಮ ಏಕವ್ಯಕ್ತಿ ಪ್ರದರ್ಶನ.

ಅವರು ವಾಣಿಜ್ಯ ಕಲಾವಿದರಾಗಿ ತಮ್ಮ ಗಿರಾಕಿಗಳ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ಅರವತ್ತು ಸಂವತ್ಸರಗಳ ಕಾಲ ಅವಿಶ್ರಾಂತವಾಗಿ, ತಡೆರಹಿತ ಕೆಲಸ ಮಾಡಿದ್ದರೂ ತಮ್ಮ ಕಲಾಕೃತಿಗಳಲ್ಲಿ ಗುಣಮಟ್ಟ, ತೂಕ, ಛಂದಸ್ಸು ಹಾಗೂ ಸ್ವಂತಿಕೆಗಳನ್ನು ಹಣಕ್ಕಾಗಿ ಎಂದೂ ಕೈಬಿಟ್ಟವರಲ್ಲ. ಅಭೂತಪೂರ್ವ ಬುದ್ಧಿಮಟ್ಟದ ಚಿತ್ರ ಸಂಯೋಜನೆ, ಹಾಗೂ ಮನಾಕರ್ಷಕ ವರ್ಣಯೋಜನೆಗಳಿಂದ ಪೌರಾಣಿಕ ಮತ್ತು ಶೃಂಗಾರ ರಸಪೂರ್ಣ ಕಲಾಕೃತಿಗಳ ಸೃಷ್ಟಿಗೈದಿದ್ದಾರೆ. ಪಂಡಿತಜೀಯವರ ಪೌರಾಣಿಕ ಕಲಾಕೃತಿಗಳ ಪ್ರತಿಕೃತಿಗಳು ಮಾತ್ರ ಭಾರತದ ಮನೆ ಮನೆಗಳ ಗೋಡೆಗಳನ್ನು ಅಲಂಕರಿಸಲಿಲ್ಲ; ಬದಲಾಗಿ, ಅಷ್ಟೇ ಮೆಚ್ಚುಗೆ, ಪ್ರೀತಿ, ವಿಶ್ವಾಸಗಳಿಂದ ಅವರ ಶೃಂಗಾರ ರಸಪೂರ್ಣ ಚಿತ್ರಗಳೂ ಮನೆ ಮನೆಗಳ ಮನ ಮನಗಳ ಭಿತ್ತಿಯನ್ನು ಅಲಂಕರಿಸಿವೆ.

ಗಿರಾಕಿಗಳ ಬೇಡಿಕೆಗಳಿಗನುಸಾರವಾಗಿ ಚಿತ್ರಿಸಿದ ಕಲಾಕೃತಿಗಳನ್ನು ಅವರ ಕೈಗೆ ಒಪ್ಪಿಸುವಾಗ ಪಂಡಿತಜೀ ಅವರ ತಾಯ್ತನದ ಹೆಂಗರುಳು ಜಾಗ್ರತಗೊಳ್ಳುತ್ತದೆ. ಅವರಿಗರಿವಿಲ್ಲದಂತೆ ಅತ್ತೂ ಬಿಡುತ್ತಾರೆ. ಮುದ್ದಿನಿಂದ, ಮಮತೆಯಿಂದ, ಲಾಲಿಸಿ, ಪಾಲಿಸಿ ಬೆಳೆಸಿದ ಮುದ್ದು ಮಗಳನ್ನು ಗಂಡನ ಮನೆಗೆ ಬೀಳ್ಕೊಡುವಾಗ ದುಃಖಿಸುವ ಅಕ್ಕರೆಯ ತಾಯಿಯಾಗುತ್ತಾರೆ ಅವರು. ''ಕನ್ಯೆ ಪೆರರೊಡವೆಯಲ್ತೆ'', ಎಂಬ ಕವಿವಾಣಿಯಂತೆ ತಮ್ಮನ್ನು ತಾವೇ ಸಂತೈಸಿಕೊಳ್ಳುತ್ತಾರೆ. ಹೀಗೆ ಪಂಡಿತರ ಅಂತಃಕರಣೆಯ ಕರುಳನ್ನು ಕೊರೆದು ಅನೇಕ ಕಲಾಕೃತಿಗಳು ಅವರಿಂದ ದೂರಾಗಿ ಕಲಾ ಪ್ರೇಮಿಗಳ ಸಂಗ್ರಹಾಲಹಗಳಲ್ಲಿ ಸೇರಿ ಹೋಗಿವೆ. ನ್ಯೂಯಾರ್ಕಿನ ದಿ. ರೋಮನ್ ಆರ್ಟ್ ಗ್ಯಾಲರಿ, ಲಂಡನ್ನಿನ ಇಂಡೊ-ಬ್ರಿಟೀಷ್ ಅಸೋಸಿಯೇಷನ್ ಸಂಸ್ಥೆಯ ಚೇರ್‌ಮನ್, ಮಿ. ಸ್ವರಾಜಪಾಲ್ ಅವರಲ್ಲಿ ಅಲ್ಲದೇ ಭಾರತ, ಇಂಗ್ಲೆಂಡ್, ಇರಾನ್, ಇರಾಕ್, ಸಿಂಗಪೂರ, ಫ್ರಾನ್ಸ್, ಕೆನಡಾ ಮುಂತಾದ ಪ್ರಪಂಚದ ಇನ್ನಿತರ ದೇಶಗಳ ಗಣ್ಯ ಕಲಾರಸಿಕರಲ್ಲಿ ಸಂಗ್ರಹಗೊಂಡಿವೆ.

ತಮ್ಮ ಅದ್ಭುತ ಕಲಾ ಸಾಧನೆಯಿಂದಲೂ ಅಪ್ರತಿಮ ನೈಪುಣ್ಯದಿಂದಲೂ ಇಡೀ

ಪ್ರಪಂಚಲ್ಲಿಯೇ ಖ್ಯಾತಿವೆತ್ತ ಎಸ್.ಎಂ. ಪಂಡಿತ್ ಅವರನ್ನು ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿಯು 1982ನೇ ವರುಷದ ಪ್ರಶಸ್ತಿಯನ್ನಿತ್ತು ಸನ್ಮಾನಿಸಿತು. 1984ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿತಲ್ಲದೇ, ಗುಲಬರ್ಗಾ ವಿಶ್ವವಿದ್ಯಾಲಯವು 1986ರ ಮಾರ್ಚ್ 4 ರಂದು ಪಂಡಿತಜೀಯವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿತು. ಈ ಎಲ್ಲ ಗೌರವ ಸನ್ಮಾನಗಳಿಂದ ಪಂಡಿತರು ತಮ್ಮ ವ್ಯಕ್ತಿತ್ವಕ್ಕೆ ಮೆರುಗುಬಂತು ಎಂದೇನೂ ಬೀಗಿದವರಲ್ಲ. ರಾಷ್ಟ್ರಕವಿ ಕುವೆಂಪು ಹೇಳುವಂತೆ –

ಕೋಗಿಲೆಯ ಕಂಠಕ್ಕೆ ಬಹುಮಾನವಿದೆಂದು
ಸ್ವರ್ಣಪದಕವ ತೊಡಿಸಿ ನೇಣು ಬಿಗಿಯುವುದೇಕೆ?

ಬಣ್ಣನೆ, ಹೊಗಳಿಕೆಗಳಿಗೆ ಮುಜಗರ ಪಟ್ಟುಕೊಳ್ಳುವ ಸೂಕ್ಷ್ಮಮತಿ ಎಂದೂ ಅಲ್ಲ. ''ಆರ್ಟ್ ಸೊಸೈಟಿ ಆಫ್ ಇಂಡಿಯಾ''ದ ಅಜೀವ ಸದಸ್ಯರಾದ ಶ್ರೀಯುತರು ಮುಂಬಯಿಯ 'ವಾಣಿಜ್ಯ ಕಲಾವಿದರ ಗಿಲ್ಡ್'ನ ಸಂಸ್ಥಾಪಕರೂ, ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಮಾಜಿ ಸದಸ್ಯರೂ ಆಗಿದ್ದಾರೆ. ಈ ದಿಶೆಯಲ್ಲಿ ಅವರ ಸೇವೆಯೂ ಅಪ್ರತಿಮ.

1941ರಲ್ಲಿ ನಿಸರ್ಗ ಪ್ರೇಮಿಗಳಾದ ಎಸ್.ಎಂ. ಪಂಡಿತರು ಒಮ್ಮೆ ಕಾಶ್ಮೀರಕ್ಕೆ ಹೋಗಿದ್ದರು. ಅಲ್ಲಿನ ಪ್ರಕೃತಿ ಸೌಂದರ್ಯದ ರಮ್ಯ ತಾಣಗಳನ್ನು ಚಿತ್ರಿಸಿಕೊಂಡು ಬರುವುದು ಅವರ ಉದ್ದೇಶವಾಗಿತ್ತು. ಆದರೆ ಆ ಚೇತೋಹಾರಿ ನಿಸರ್ಗ ಸೌಂದರ್ಯದ ದೃಶ್ಯಗಳನ್ನು ಕಣ್ತುಂಬ ನೋಡಿ ಆನಂದಿಸಿದರೇ ವಿನಃ ಅಲ್ಲಿನ ಒಂದು ದೃಶ್ಯವನ್ನೂ ಚಿತ್ರಿಸಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ.

''ಅಂಥ ಮನಮೋಹಕ ರಮಣೀಯತೆಯನ್ನು ಚಿತ್ರಿಸಿ ಅದರ ಪ್ರಾಕೃತಿಕ ಸೌಂದರ್ಯಕ್ಕೆ ಅಪಚಾರ ಮಾಡಲು ನನ್ನ ಮನಸ್ಸು ಒಪ್ಪಲಿಲ್ಲ. ಪ್ರಕೃತಿ ಮಾತೆ ಎಷ್ಟು ಸುಂದರಳು! ಎಷ್ಟು ರಮ್ಯಳು!! ಎಷ್ಟು ದೊಡ್ಡವಳು, ಎಂದು ತಿಳಿಯಬೇಕಾದರೆ ಕಾಶ್ಮೀರಕ್ಕೆ ಹೋಗಬೇಕು. ಆ ನಿಸರ್ಗ ರಮ್ಯ ನೋಟಗಳನ್ನು ಹೃದಯದ ಕಣ್ಣಿನಿಂದ ನೋಡಬೇಕು; ಅಷ್ಟೇ! ಚಿತ್ರವನ್ನು ಚಿತ್ರಿಸಲು ಹುಲುಮಾನವನಾದ ನಾನು ಖಂಡಿತವಾಗಿಯೂ ಶಕ್ತನಲ್ಲ ; ಎಂದೆನಿಸಿತು. ಹಾಗೆಯೇ ಬಂದುಬಿಟ್ಟೆ'', ಎನ್ನುತ್ತಾರೆ ಪಂಡಿತ್. ಹೀಗೆ ಅದೆಷ್ಟೋ ಬಾರಿ ಪ್ರಕೃತಿಯ ಭವ್ಯತೆಯನ್ನೂ, ರಮಣೀಯತೆಯನ್ನೂ ಸೊಗಸನ್ನೂ ಕಂಡು ಮೂಕವಿಸ್ಮಿತನಾಗಿ ಚಿತ್ರಿಸದೇ ಕೇವಲ ನೋಡಿ ಆನಂದಪಟ್ಟು ಬಂದುದುಂಟು.

''ಕಲಾವಿದರಿಗೆ ದೈವೀ ಪ್ರೇರಣೆಯು ಅಗತ್ಯ. ನಿಸರ್ಗವೇ ಅವನ ಚೈತನ್ಯ, ಸ್ಫೂರ್ತಿಯ ಸೆಲೆ; ಪ್ರಕೃತಿ ಕಲಾವಿದನನ್ನು ಕರೆಯುತ್ತದೆ. ಪ್ರಕೃತಿಯೊಂದಿಗೆ ಒಂದಾದವರು ಮಾತ್ರ ನೈಜ ಸುಖಾನುಭವವನ್ನು ಹೊಂದುತ್ತಾರೆ'', – ಎಂದು ನಂಬಿದವರು ಪಂಡಿತರು.

''ನಾನಿನ್ನೂ ಅಭ್ಯಾಸ ಮಾಡುವುದು ಸಾಗರದಷ್ಟಿದೆ'', ಎಂದು ಭಾವ ಸಮಾಧಿಯಿಂದ

ಎಚ್ಚರಗೊಂಡವರಂತೆ ಅವರ ಮಾತುಗಳು ಹೊರಹೊಮ್ಮುತ್ತವೆ.

ಆಧುನಿಕ ಕಲೆಯ ವಿಚಾರವಾಗಿ ಅವರು, ''ಬಾಷೆ, ಸಾಹಿತ್ಯಗಳಂತೆ ಕಲೆಯೂ ಒಂದು ಅಭಿವ್ಯಕ್ತಿ ಮಾಧ್ಯಮ. ಈ ಮಾಧ್ಯಮಕ್ಕೆ ಪ್ರಾಚೀನ, ಅರ್ವಾಚೀನ, ಆಧುನಿಕ ಎಂದು ಏಕೆ ಕರೆಯುತ್ತಾರೆಂದು ನನಗೆ ಅರ್ಥವಾಗಿಲ್ಲ. ಈ ಅಭಿವ್ಯಕ್ತಿ ಮಾಧ್ಯಮ ಕಾಲಕಾಲಕ್ಕೆ ಬದಲಾವಣೆಯಾಗುತ್ತಲೇ ಬಂದಿದೆ. ಅದಕ್ಕನುಸಾರವಾಗಿ ಈ ಮಾಧ್ಯಮಕ್ಕೆ ಹೊಸರೂಪ ಕೊಡುವುದಾದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಈ ದಿಶೆಯಲ್ಲಿ ಕಲಾವಿದನು ಸರ್ವತಂತ್ರ ಸ್ವತಂತ್ರನಾಗಿರಬೇಕು; ಬಂಧನಗಳಿಂದ, ಚೌಕಟ್ಟಿನಿಂದ ಮುಕ್ತನಾಗಿರಬೇಕು.'' ಎಂಬ ಅಭಿಪ್ರಾಯ ಹೊಂದಿದವರಾಗಿದ್ದಾರೆ.

''ದೈವೀಶಕ್ತಿಯ ಅನಂತ ಮುಖಗಳನ್ನೂ, ಲಾವಣ್ಯವನ್ನೂ ಅನುಪಮ ಸೌಂದರ್ಯವನ್ನೂ ತ್ರಿಕಾಲಾಬಾಧಿತ ಸತ್ಯ ತತ್ವಗಳನ್ನೂ ಭಾರತೀಯ ಘನ ಸಂಸ್ಕೃತಿಯ ಹಿರಿಮೆಯನ್ನೂ ಜಗತ್ತಿನಾದ್ಯಂತ ಬೆಳಗಿಸಿ, ಅದನ್ನು ರಕ್ಷಿಸಿಕೊಂಡು ಬರುವುದೇ ಭಾರತೀಯ ಕಲಾವಿದನ ಪರಮ ಗುರಿಯಾಗಬೇಕು'' ಎಂದು ಸದಾ ಧ್ಯಾನಿಸುವ ಪಂಡಿತಜೀ ಗುಲಬರ್ಗಾದಲ್ಲಿ ತಮ್ಮದೇ ಆದ ಒಂದು ಕಲಾಗ್ಯಾಲರಿಯನ್ನು ಕಟ್ಟುವ ಧ್ಯೇಯವನ್ನಿಟ್ಟು ಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಈಗಾಗಲೇ ತಮ್ಮ ಗುಲಬರ್ಗಾ ನಿವಾಸದಲ್ಲಿಯೇ ಒಂದು ಪುಟ್ಟ ಗ್ಯಾಲರಿಯನ್ನು ಪ್ರಾರಂಭಿಸಿಯೂ ಬಿಟ್ಟಿದ್ದಾರೆ.

ಗುಲಬರ್ಗಾದ ಜಗತ್‌ವೃತ್ತವನ್ನು ದಾಟಿ, ಸೂಪರ್ ಬಜಾರವನ್ನಿಳಿದು ಬಲಗಡೆಯ ಇಕ್ಕಟ್ಟಾದ ಓಣಿಯೊಂದರಲ್ಲಿ ಹತ್ತಾರು ಹೆಜ್ಜೆಗಳನ್ನು ತುಳಿದು ಮುಂದೆ ಹೋದರೆ ''ಶ್ರೀ ವಿಶ್ವಕರ್ಮ ಪ್ರಿಂಟರ್ಸ್'' ಎಂಬ ಬೋರ್ಡನ್ನು ತೂಗುಹಾಕಿದ ಎಸ್.ಎಂ. ಪಂಡಿತ್ ಅವರ ಮನೆ ಕಾಣಿಸುತ್ತದೆ. ಒಳಗೆ ಕಾಲಿರಿಸಿದಾಗ ಮೊದಲು ನಮಗೆ ಗೋಚರಿಸುವುದು ಒಂದು ಪುಟ್ಟ ಮುದ್ರಣಶಾಲೆ. ಅಲ್ಲಿಂದ ಒಳಗಿನ ಹಜಾರದಲ್ಲಿ ಇಣುಕಿದಾಗ ಹತ್ತಾರು ಚಿಕ್ಕಪುಟ್ಟ ಮಕ್ಕಳು ಅತ್ತಿಂದಿತ್ತ ಕುಣಿದಾಡುತ್ತ ಮನೆತುಂಬ ಆಟವಾಡಿಕೊಂಡಿರುವ ಪಂಡಿತಜೀಯವರ ತುಂಬು ಸಂಸಾರದ ನಂದಗೋಕುಲ. ಈ ಹಜಾರವನ್ನು ದಾಟಿ ಬಲಬದಿಯ ಪಾವಟಿಗೆಗಳನ್ನು ಏರಿ ಮೇಲೆ ಹೋದಾಗ ಕಲಾಕೃತಿಗಳ ಸಂಗ್ರಹಾಲಯ. ಈ ಸಂಗ್ರಹಾಲಯದಲ್ಲಿ ಕಾಲಿಡಲು ಮೊದಲು ನಮಗೇಕೋ ಸಂಕೋಚವೆನಿಸುತ್ತದೆ. ಇಂಥಹ ಪವಿತ್ರ ಕಲಾದೇಗುಲವನ್ನು ಕಾಲಿನಿಂದ ತುಳಿಯುತ್ತ ನೋಡುವುದೇ? ಎಂದು.

''ಪರವಾಗಿಲ್ಲ ಒಳಕ್ಕೆ ಬನ್ನಿ'' ಎಂದು ಮನೆಯವರಾರಾದರೂ ಧೈರ್ಯ ನೀಡಿದಾಗಲೇ ನಾವು ಒಳಕ್ಕೆ ಕಾಲಿರಿಸಲು ಸಾಧ್ಯ. ಒಳಗೆ ಹೋಗಿ ನೋಡಿದಾಗ ನಮ್ಮನ್ನು ನಾವೇ ಮರೆತುಬಿಡುತ್ತೇವೆ. ರಮಣೀಯವಾದ ಹೊಸಲೋಕವೊಂದನ್ನು ನೋಡುತ್ತಿರುವ ಭ್ರಮೆ ನಮಗುಂಟಾಗುತ್ತದೆ. ಕಲಾ ರಸಿಕರಿಗೆ ಅದೊಂದು ಸ್ವರ್ಗ. ಕಲಾಭ್ಯಾಸಿಗಳಿಗೆ, ಕಲಾವಿದರಿಗೆ

ಅದೊಂದು ಗುರುಕುಲವಾಗಿ ಕಾಣಿಸುತ್ತದೆ. ನೋಡುತ್ತ ಹೋದಂತೆ ಒಂದೊಂದು ಕೃತಿಯೂ ನಮ್ಮನ್ನು ಮುಂದೆ ಹೋಗದಂತೆ ಸೆಳೆದುಬಿಡುತ್ತದೆ.

ಶಕುಂತಲೆಯ ಪತ್ರ ಲೇಖನ :

ಕಣ್ವಾಶ್ರಮದ ಒಂದು ಬದಿಯಲ್ಲಿ ಶಕುಂತಲೆ ಕೈಯಲ್ಲಿ ಕಮಲ ಪತ್ರವನ್ನು ಹಿಡಿದು ಪತ್ರದಲ್ಲಿ ಏನನ್ನೋ ಬರೆಯಲು ಕೈ ಎತ್ತಿ ಹಿಡಿದಿದ್ದಾಳೆ. ಅವಳೊಟ್ಟಿಗೆ ಪ್ರಾಣಸಖಿಯರಾದ ಅನುಸೂಯೆ ಮತ್ತು ಪ್ರಿಯಂವದೆಯರು ಇದ್ದಾರೆ. ಒಬ್ಬಳು ಮಲಗಿದ್ದಾಳೆ, ಇನ್ನೊಬ್ಬಳು ಮೈಮರೆತ ಶಕುಂತಲೆಯನ್ನು ಎಚ್ಚರಿಸುವಂತೆ ಭುಜ ತಟ್ಟಿ ಕುಳಿತಿದ್ದಾಳೆ. ದುಷ್ಯಂತನ ಪ್ರೇಮಪಾಶದಲ್ಲಿ ಸಿಲುಕಿದ ಶಕುಂತಲೆ ದುಷ್ಯಂತನಿಗೆ ಮನೋಭಿಲಾಷೆಯನ್ನು ಈ ಕಮಲ ಪತ್ರದಿಂದ ತಿಳಿಸಬೇಕಿದೆ. ಆದರೆ ಪ್ರಿಯಕರನನ್ನು ಏನೆಂದು ಸಂಬೋಧಿಸುವುದು? ಮನದ ಇಂಗಿತವನ್ನು ಹೇಗೆ ವ್ಯಕ್ತಪಡಿಸುವುದು? ಎಂದು ಆಕೆಗೆ ತಿಳಿದಿಲ್ಲ. ಸಂದಿಗ್ಧಕ್ಕೊಳಗಾಗಿದ್ದಾಳೆ. ಅವಳನ್ನು ಛೇಡಿಸುವ ತುಂಟತನ ಸಖಿಯರಲ್ಲಿ. ಹಿನ್ನೆಲೆಯ ಪೊದೆಯ ಮರೆಯಲ್ಲಿ ನಿಂತ ಶಕುಂತಲೆಯ ಪ್ರೀತಿಯ ಹರಿಣಿಯೂ ಶಕುಂತಲೆಯ ಸಂದಿಗ್ಧತೆಯನ್ನು ಗಮನಿಸಿ ಚಿಂತೆಗೊಳಗಾಗಿದೆ. ಶಕುಂತಲೆಯ ಎಡಬದಿಯಲ್ಲಿ ಹರಿಯುತ್ತಿರುವ ಜಲವೂ ಶಕುಂತಲೆಯ ಪರಿಸ್ಥಿತಿಯನ್ನು ಗಮನಿಸಿ ನಿಂತು ನಿಂತು ಹರಿಯುತ್ತದೆ. ಹಿನ್ನೆಲೆಯ ನಿಸರ್ಗವೂ ಸಂದಿಗ್ಧತೆಯ ತೊಡಕಿನಲ್ಲಿ ಸಿಲುಕಿ ತೊಳಲಾಡುತ್ತಿದೆ.

''ಅಭಿಜ್ಞಾನ ಶಾಕುಂತಲಮ್'' ಕೃತಿಕಾರ ಮಹಾಕವಿ ಕಾಳಿದಾಸನೂ ಪಂಡಿತರ ಈ ಕಲ್ಪನಾ ವೈಖರಿ ಚಿತ್ರಣದ ಸೊಬಗನ್ನು ಕಂಡು ಬೆರಳುಕಚ್ಚಬೇಕು.

ನಳ-ದಮಯಂತಿ :

ಶನಿದೇವನ ಪ್ರಭಾವದಿಂದಾಗಿ ನಿಷದ ರಾಜ್ಯವನ್ನು ಕಳೆದುಕೊಂಡು ಹೊರಟ ನಳ ಮಹಾರಾಜ ಮತ್ತು ಅವನನ್ನು ಪ್ರೀತಿಸಿ ಮದುವೆಯಾದ ನಲ್ಮೆಯ ಸತಿ ದಮಯಂತಿ ಕಾಡಿನಲ್ಲಿದ್ದಾರೆ. ಭವ್ಯವಾದ ಮರವೊಂದರ ಅಡಿಯಲ್ಲಿ ವಿಶ್ರಾಂತಿಗಾಗಿ ತಂಗಿದ್ದಾರೆ. ಮಾರ್ಗಾಯಾಸದಿಂದ ಮೈಮರೆತು ಮಲಗಿದ ದಮಯಂತಿಗೆ ನಿದ್ರೆಯಾವರಿಸಿಕೊಂಡಿದೆ. ರಾಜ್ಯವನ್ನು ಕಳೆದುಕೊಂಡು, ಚಿಂತಾಕುಲನಾದ ನಳಮಹಾರಾಜನಿಗೆ ಎಚ್ಚರವಾಗಿದೆ. ಎದ್ದು ಕುಳಿತಿದ್ದಾನೆ. ಹೆಂಡತಿಯ ಮುಖವನ್ನು ನೋಡಿದ್ದಾನೆ. ಕರುಳು ಹಿಸುಕಿದಂತಾಗಿದೆ. ''ನನಗೆ ಬಂದ ಕಷ್ಟಕಾರ್ಪಣ್ಯಗಳನ್ನು ಈ ಸುಕೋಮಲೆಯೇಕೆ ಅನುಭವಿಸಬೇಕು? ರಾಜಗೃಹದಲ್ಲಿ ನೂರಾರು ಸಖಿಯರೊಂದಿಗೆ ಚಲ್ಲಾಟವಾಡಿಕೊಂಡಿರಬೇಕಾದ ಈ ಮುಗ್ಧೆಗೇಕೆ ಅರಣ್ಯವಾಸದ ಕಷ್ಟಕೋಟಲೆಗಳು!? ಬೇಡ. ಅವಳನ್ನು ಇಲ್ಲಿಯೇ ಮಲಗಿದಂತೆಯೇ ಅವಳು ಎಚ್ಚರಗೊಳ್ಳುವ

ಮುನ್ನವೇ ಬಿಟ್ಟು ದೂರ, ದೂರಕ್ಕೆ ಹೋಗಿಬಿಡುತ್ತೇನೆ'' ಎಂದು ಚಿಂತಿಸುತ್ತಾನೆ.

ತನ್ನ ಮೈ ಮೇಲೆ ಬಟ್ಟೆಗಳೂ ಇಲ್ಲದ್ದನ್ನು ಗಮನಿಸಿ ತನ್ನ ದುರ್ದೈವಕ್ಕೆ ತಾನೇ ಹಳಹಳಿಸುತ್ತಾನೆ. ದಮಯಂತಿಯ ಎದೆಯ ಹೊದಿಕೆಯನ್ನೇ ಸುತ್ತಿಕೊಂಡು ಹೊರಟು ಹೋಗಿಬಿಡಲು ನಿರ್ಧರಿಸುತ್ತಾನೆ. ಮೈಮರೆತು ಮಲಗಿದ ದಮಯಂತಿಯ ಎದೆಯ ಹೊದಿಕೆಯನ್ನು ತನ್ನ ಎಡದ ಕೈಯಿಂದ ನಿಧಾನವಾಗಿ ಎಳೆಯುತ್ತಿದ್ದಾನೆ. ಬಲದ ಕೈಯಿಂದ ಎಳೆದರೆ ಬಲಗೈ ಶಕ್ತಿಯ ಭಾರದಿಂದಾಗಿ ದಮಯಂತಿ ಎಚ್ಚರಗೊಳ್ಳಬಹುದು ಎಂಬ ಭಯ, ನಳ ಮಹಾರಾಜನಿಗೆ. ಪತಿಯ ಸನಿಹದಲ್ಲಿರುವ ನನಗೆ ಕಾಡುವಾಸದ ಭಯವೇ? ಎಂದು ಮೈಮರೆತು ಮಲಗಿ ನಿದ್ರಿಸುತ್ತಿರುವ ನಿಶ್ಚಿಂತ ದಮಯಂತಿ. ಅವರಿಬ್ಬರ ಭಾವನೆಗಳ ಚಿತ್ರಣದಲ್ಲಿ ಅನ್ಯಾದೃಶ ಪ್ರತಿಭೆಯನ್ನು ಮೆರೆದಿದ್ದಾರೆ ಎಸ್.ಎಂ. ಪಂಡಿತ್.

ಮಹಾಕವಿ ಕಾಳಿದಾಸನ ''ಅಭಿಜ್ಞಾನ ಶಾಕುಂತಲಮ್'' ಕೃತಿಯಲ್ಲಿ ಉಕ್ತವಾದ ವಿಶ್ವಾಮಿತ್ರ-ಮೇನಕೆಯರ ಕಥೆಗೆ ಸಂಬಂಧಿಸಿದ ಮೂರು ತೈಲ ವರ್ಣ ಕಲಾಕೃತಿಗಳ ಅಸದೃಶವಾದ ಚಿತ್ರಗಳು, ಈ ಗ್ಯಾಲರಿಯಲ್ಲಿವೆ.

ವಿಶ್ವಾಮಿತ್ರ-ಮೇನಕೆ :

ಕಾಡಿನ ಒಂದು ಶಿಲಾಸನದ ಮೇಲೆ ಉಗ್ರ ತಪಸ್ವಿ, ವಜ್ರದೇಹಿ, ಬ್ರಹ್ಮರ್ಷಿ ವಿಶ್ವಾಮಿತ್ರ ಕುಳಿತಿದ್ದಾನೆ. ಅವನು ಜಡೆ, ಅವನ ಮೊಣಕಾಲುಗಳನ್ನು ಸವರುತ್ತಿರುವ ಬಿಳಿಯ ದಾಡಿ, ಬಲಗೈಯಲ್ಲಿರುವ ಯೋಗದಂಡಗಳು ಅವನು ಸಾಧಿಸಿದ ಪೂರ್ಣ ಪುರುಷತ್ವ, ತಪೋ ತೇಜಗಳು ಸ್ಫುಟವಾಗಿ ಎದ್ದು ಕಾಣುವಂತೆ ಚಿತ್ರಿತವಾಗಿದೆ. ವಿಶ್ವಾಮಿತ್ರನ ಈ ಸಾಧನೆಯಿಂದ ಕರುಬಿದ ದೇವೇಂದ್ರನು ಅವನ ತಪೋಭಂಗಕ್ಕಾಗಿಯೇ ಕಳುಹಿದ ಇಂದ್ರಲೋಕದ ಅಪ್ಸರಸಿ ಮೇನಕೆ ವಿಶ್ವಾಮಿತ್ರನ ಎಡಬದಿಯಲ್ಲಿ ಸ್ವರ್ಗದಿಂದ ಧರೆಗಿಳಿಯುತ್ತಿದ್ದಾಳೆ.

''ಈ ನಿನ್ನ ಉಗ್ರ ತಪಸ್ಸು, ಉಗ್ರ ತೇಜಸ್ಸು, ಈ ನಿನ್ನ ಸಾಧನೆ, ಈ ನಿನ್ನ ಬ್ರಹ್ಮತ್ವಗಳನ್ನು ನನ್ನ ಸ್ವರ್ಗೀಯ ಲಾವಣ್ಯದಿಂದ ಕ್ಷಣಮಾತ್ರದಲ್ಲಿ ಕಬಳಿಸಿ ಬಿಡುತ್ತೇನೆ'' - ಎನ್ನುವಂತಿರುವ ಅವಳ ಮುಖಭಾವ, ಭಂಗಿಗಳ ಚಿತ್ರಣಕ್ಕೆ ಪಂಡಿತರು ಹೆಚ್ಚು ಒತ್ತು ಕೊಟ್ಟದ್ದನ್ನು ಈ ಚಿತ್ರದಲ್ಲಿ ಗಮನಿಸಬಹುದು.

ವಿಶ್ವಾಮಿತ್ರ-ಮೇನಕೆಯರ ಪ್ರೇಮಸಲ್ಲಾಪ :

ನಿಸರ್ಗ ರಮಣೀಯ, ಸುಂದರ ತಾಣವೊಂದರಲ್ಲಿ ವಿಶ್ವಾಮಿತ್ರ-ಮೇನಕೆಯರು ಪ್ರಣಯ ಬಂದಿಗಳಾಗಿದ್ದಾರೆ. ಉಗ್ರ, ತಪಸ್ವಿಯೂ, ವಜ್ರದೇಹಿಯೂ ಆದ ಬ್ರಹ್ಮರ್ಷಿ ವಿಶ್ವಾಮಿತ್ರನು ಮೇನಕೆಯ ರೂಪ, ಲಾವಣ್ಯಗಳ ಸೆಳೆತಕ್ಕೆ ಸಿಲುಕಿದ್ದಾನೆ. ತನ್ನನ್ನು ತಾನು

ಮರೆತುಬಿಟ್ಟಿದ್ದಾನೆ. ಮೇನಕೆಯನ್ನು ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿಬಿಟ್ಟಿದ್ದಾನೆ. ಅವನ ತಪಃ ಪ್ರಭಾವವೆಲ್ಲ ಮೇನಕೆಯ ಸುಕೋಮಲವಾದ ಅಂಗಸ್ಪರ್ಶದಿಂದ ಕರಗಿಹೋಗಿದೆ. ಅದರಂತೆ ಮೇನಕೆಯೂ ಸಹ, ''ನಾನು ಸ್ವರ್ಗಲೋಕದ ಸುಂದರಿ, ಅಪ್ಸರಸಿ, ಸ್ವರ್ಗಾಧಿಪತಿ ದೇವೇಂದ್ರನೂ ನನ್ನ ರೂಪ ಲಾವಣ್ಯಗಳಿಂದ ಮರುಳುಗೊಳ್ಳುತ್ತಾನೆ'', ಎಂಬ ಬಿಗುಮಾನವನ್ನೂ ತೊರೆದು ತನ್ನ ಸುಕೋಮಲವಾದ ದೇಹವನ್ನೂ ಹೃದಯವನ್ನೂ ಕಂಚಿನ ದೇಹದ ವಿಶ್ವಾಮಿತ್ರನಿಗೆ ಸಂಪೂರ್ಣವಾಗಿ ಸಮರ್ಪಿಸಿಬಿಟ್ಟಿದ್ದಾಳೆ; ಸಹಜವಾದ ಹೆಣ್ತನವನ್ನು ತೋರಿದ್ದಾಳೆ.

ತಪೋಭಂಗದ ಅರಿವು :

ಈವರೆಗೆ ರತಿಕ್ರೀಡೆಯಲ್ಲಿ ಮೈಮರೆತು ಈಗ ಎಚ್ಚರಗೊಂಡು ವಾಸ್ತವ ಪ್ರಪಂಚಕ್ಕೆ ಬಂದ ವಿಶ್ವಾಮಿತ್ರ ಮೇನಕೆಯರು ಹತ್ತಿರದಲ್ಲಿಯೇ ಹರಿಯುತ್ತಿದ್ದ ತೊರೆಯೊಂದರಲ್ಲಿ ಮೀಯಲು ತೊರೆಗಿಳಿದಿದ್ದಾರೆ. ನೋಡುಗರಿಗಭಿಮುಖವಾಗಿ ಮೇನಕೆಯು ತನ್ನ ಚೆಲುವು ಹಾಗೂ ಲಾವಣ್ಯಮಯ ಸುಂದರ ಅಂಗಾಂಗಗಳ ಪ್ರದರ್ಶನ ಮಾಡುವಂತೆ ನಿಂತು, ತನ್ನ ಎದೆಯ ತೊಯ್ದ ಶ್ವೇತವಸ್ತ್ರಗಳನ್ನು ಎತ್ತಿಹಿಡಿದಿದ್ದಾಳೆ. ನೋಡುಗರಿಗೆ ತನ್ನ ಬೆನ್ನು ತೋರಿಸುತ್ತ ಮೇನಕೆಗೆದುರಾಗಿ ವಿಶ್ವಾಮಿತ್ರನು ತನ್ನ ತಪ್ಪಿನ ಅರಿವಿನಿಂದಾಗಿ ಹಣೆಗೆ ಕೈಕೊಟ್ಟು ತಲೆತಗ್ಗಿಸಿ ಕುಳಿತಿದ್ದಾನೆ – ಆಹಾ ಎಂತಹ ಅದ್ಭುತ ಚಿತ್ರ ಸಂಯೋಜನೆ !

''ನಾನು ಗೆದ್ದೆ'' ಎಂಬ ಮೇನಕೆಯ ಪ್ರಫುಲ್ಲಿತ ವದನಾರವಿಂದ, ''ನಾನು ಸೋತೆ'' ಎಂಬುದನ್ನು ವಾಸ್ತವ ಪ್ರಪಂಚಕ್ಕೆ ತೋರಿಸುವಂತೆ ಪ್ರೇಕ್ಷಕರಿಗೆ ಬೆನ್ನು ತೋರಿಸುತ್ತ ತೊರೆಯ ಕಲ್ಲೊಂದರ ಮೇಲೆ ಕುಳಿತ ನಿರ್ವಿಣ್ಣ ವಿಶ್ವಾಮಿತ್ರ! ನಿಜಕ್ಕೂ ಪಂಡಿತರ ಅದ್ಭುತ ಕಲ್ಪನೆಯ ಚೆಲುಮೆ ಚೇತೋಹಾರಿಯಾಗಿ ಈ ಚಿತ್ರದಲ್ಲಿ ಚಿಮ್ಮಿದೆ. ಇದೇ ವಸ್ತುವನ್ನು ರಾಜಾರವಿವರ್ಮನೂ ಚಿತ್ರಿಸಿದ್ದಾನೆ. ಪಂಡಿತರ ಚಿತ್ರದೆದುರು ಆ ಚಿತ್ರ ಅಶ್ಲೀಲವಾಗುವಂತೆ ತೋರಿದಲ್ಲಿ ಆಶ್ಚರ್ಯವಿಲ್ಲ.

ಶಿವನ ಲೀಲೆಗಳು :

ಪ್ರಜಾಪತಿ ದಕ್ಷಬ್ರಹ್ಮನ ಮಗಳು ದಾಕ್ಷಾಯಣಿ ತಂದೆಯ ಇಚ್ಛೆಗೆ ವಿರೋಧವಾಗಿ ದಾಕ್ಷಾಯಣಿ ಸ್ಮಶಾನವಾಸಿ ಪರಶಿವನನ್ನು ಮೆಚ್ಚಿ ಅವನನ್ನು ಆರಾಧಿಸಿ, ಸಾಕ್ಷಾತ್ಕರಿಸಿಕೊಂಡು ವರಿಸಿದ್ದಳು. ಇದರಿಂದಾಗಿ ದಕ್ಷನಿಗೆ ಶಿವನಮೇಲೆ ಅನಾದರ, ಅಸಡ್ಡೆ. ಒಂದು ಬಾರಿ ದಕ್ಷನು ಮಹಾಯಜ್ಞವನ್ನೇರ್ಪಡಿಸಿದನು. ಬ್ರಹ್ಮಾಂಡದ ಎಲ್ಲ ದೇವ-ದೇವತೆಗಳಿಗೂ, ಯಕ್ಷ, ಕಿನ್ನರ-ಕಿಂಪುರಷರಿಗೂ, ಋಷಿ-ಮುನಿಗಳಿಗೂ, ರಾಜ ಮಹಾರಾಜರುಗಳಿಗೂ ಈ ಯಜ್ಞದಲ್ಲಿ ಪಾಲುಗೊಳ್ಳುವಂತೆ ಆದರದ ಆಮಂತ್ರಣಗಳನ್ನು ಕಳಿಸಿದ್ದನು. ಅಸಡ್ಡೆಯಿಂದ ಪರಶಿವನಿಗೆ

ಮಾತ್ರ ಆಮಂತ್ರಣವನ್ನು ಕಳಿಸಿರಲಿಲ್ಲ. ತಂದೆ ಆರಂಭಿಸಿದ ಮಹಾಯಜ್ಞದ ಸಮಾಚಾರವನ್ನು ನಾರದ ಮಹರ್ಷಿಗಳಿಂದ ತಿಳಿದ ದಾಕ್ಷಾಯಣಿ ಸಮಾರಂಭಕ್ಕೆ ತಾನೂ ಹೋಗುವುದಾಗಿ ಪರಶಿವನಲ್ಲಿ ಯಾಚಿಸಿದಳು.

''ನಮಗೆ ಅವಮಾನ ಮಾಡಲೆಂದೇ ದಕ್ಷನು ಆಮಂತ್ರಣವನ್ನು ಕೊಟ್ಟಿಲ್ಲ. ಬೇಕೆಂದೇ ನಮಗೆ ಆಮಂತ್ರಣ ನೀಡದ ದಕ್ಷನ ಮನೆಗೆ ಹೋಗುವುದು ಸರಿಯಲ್ಲ. ಕರೆಯದವರ ಮನೆಗೆ ಕಾಲಿರಿಸುವುದೇ?'' ಎಂದು ಶಿವನು ಪರಿಪರಿಯಾಗಿ ಅದೆಷ್ಟು ರೀತಿಯಿಂದ ಹೇಳಿದರೂ ''ತವರು ಮನೆಗೆ ಹೋಗಲು ತಂದೆಯ ಆಮಂತ್ರಣ ಬೇಕೇ?'' – ಎಂದು ದಾಕ್ಷಾಯಣಿ ಶಿವನ ಮಾತು ಮೀರಿ ಯಜ್ಞಸಮಾರಂಭಕ್ಕೆ ಹೋಗುತ್ತಾಳೆ.

ಯಜ್ಞ ಮಂಟಪದಲ್ಲಿ ಕಾಲಿರಿಸಿದ ದಾಕ್ಷಾಯಣಿಯನ್ನು ಕಂಡ ದಕ್ಷನು ಕಿಡಿಕಿಡಿಯಾಗುತ್ತಾನೆ. ''ಬೂದಿಬಡುಕ, ಭೂತಗಣಗಳನ್ನು ಕಟ್ಟಿಕೊಂಡು ತಿರುಗುವ, ಸ್ಮಶಾನವಾಸಿ ತಿರುಪೆಯ ಶಿವನು ಆಮಂತ್ರಣವಿಲ್ಲದೇ ನಿನ್ನನ್ನು ಇಲ್ಲಿಗೆ ಕಳಿಸಿದನೇ? ನಾಚಿಕೆಗೇಡು'' – ಎಂದು ಮನಸ್ವೀ ಶಿವನನ್ನು ನಿಂದಿಸುತ್ತಾನೆ.

''ಕೂಡಿದ ಜನರೆದುರು ಶಿವನಿಂದೆಯನ್ನು ಕೇಳಬೇಕಾಯಿತಲ್ಲ'', ಎಂಬ ಅಪಮಾನ ದುಃಖಗಳನ್ನು ಸಹಿಸದ ದಾಕ್ಷಾಯಿಣಿ ಯಜ್ಞಕುಂಡಕ್ಕೆ ಹಾರಿ ಪ್ರಾಣಾರ್ಪಣೆ ಮಾಡುತ್ತಾಳೆ.

ಈ ಕಥೆಯನ್ನು ಆಧರಿಸಿ ಎಸ್.ಎಂ. ಪಂಡಿತರು ಎರಡು ಕಲಾಕೃತಿಗಳನ್ನು ರಚಿಸಿದ್ದಾರೆ.

1. ಚಿಂತಾಮಗ್ನ ಶಿವ :

ದಾಕ್ಷಾಯಣಿಯ ದಕ್ಷನ ಯಜ್ಞಕುಂಡದಲ್ಲಿ ಹಾರಿ ಪ್ರಾಣಾರ್ಪಣೆ ಮಾಡಿಕೊಂಡ ಸಮಾಚಾರ ಶಿವನಿಗೆ ತಿಳಿಯುತ್ತದೆ. ''ತಂದೆಯ ಮನೆಯಾದರೂ ಆಮಂತ್ರಣವಿಲ್ಲದೇ ಹೋಗುವುದು ಸರಿಯಲ್ಲವೆಂದು ನಾನೆಷ್ಟು ಪರಿಯಿಂದ ಹೇಳಿದರೂ ದಾಕ್ಷಾಯಣಿ ಕೇಳಲಿಲ್ಲ. ಇದರಿಂದಾಗಿ ಅವಳು ತನ್ನ ಪ್ರಾಣಕ್ಕೂ ನಾನು ಅಪಮಾನಕ್ಕೂ ಗುರಿಯಾಗಬೇಕಾಯಿತು. ಮುಂದೇನು ಮಾಡುವುದು'', ಎಂದು ಚಿಂತಿಸುತ್ತ ಕೈಯಲ್ಲಿ ತ್ರಿಶೂಲವನ್ನು ಹಿಡಿದು ಮುಡಿಗೆದರಿದ ಶಿವನು ಕೈಲಾಸದ ಒಂದು ಬದಿಯಲ್ಲಿ ಕುಳಿತಿದ್ದಾನೆ.

ತೈಲವರ್ಣ ಮಾಧ್ಯಮದಲ್ಲಿ ಚಿತ್ರಿತವಾದ ಈ ಚಿತ್ರವು ಆತ್ಮಾಭಿಮಾನಿಗಳನ್ನು ಕೆರಳಿಸುತ್ತದೆ. ಪ್ರೀತಿಯ ಸತಿಯ ಅಗಲಿಕೆ, ಅವಮಾನಗಳಿಂದ ಚಿಂತಾಮಗ್ನನಾದ ಪರಶಿವನು ಪಂಡಿತರ ಕಲ್ಪನೆಯಲ್ಲಿ ಲೌಕಿಕ ವ್ಯಕ್ತಿಯಾಗಿ ವ್ಯಕ್ತನಾಗಿದ್ದಾನೆ.

2. ದಾಕ್ಷಾಯಣಿಯ ಶವವನ್ನು ಹೊತ್ತ ಶಿವ :

ಪ್ರೀತಿಯ ಸತಿ ದಾಕ್ಷಾಯಣಿಗೆ ಬಂದ ಅವಸ್ಥೆಯಿಂದ ಉರಿದೆದ್ದ ಶಿವನು ನೇರವಾಗಿ ದಕ್ಷನ ಯಜ್ಞಮಂಟಪಕ್ಕೆ ಹೋಗುತ್ತಾನೆ. ಯಜ್ಞಕುಂಡದಿಂದ ಸತಿಯ ಶವವನ್ನು ಎತ್ತಿ

ಹೆಗಲಮೇಲಿರಿಸಿಕೊಂಡು ಬರುತ್ತಿದ್ದಾನೆ. ಶಿವನ ಕೆಂಜೆಡೆಗಳು ಬಿಚ್ಚಿ ಹದಿನಾಲ್ಕು ಲೋಕಗಳನ್ನು ಸುಟ್ಟು ಭಸ್ಮಮಾಡುವ ಭೀಕರ ಜ್ವಾಲೆಗಳಂತೆ ನಾಲ್ದೆಸೆಗಳಿಗೂ ಹರಡಿವೆ. ಪ್ರಳಯಕರ್ತ ಪರಶಿವನ ಉಗ್ರಕೋಪ ಹೇಗಿರುತ್ತದೆಂದು ಈ ಚಿತ್ರವನ್ನು ನೋಡಿಯೇ ಕಂಡುಕೊಳ್ಳಬೇಕು. ಜಲವರ್ಣಗಳಿಂದ ಚಿತ್ರಿತವಾದ ಈ ಚಿತ್ರವು ಪಂಡಿತರ ಜಲವರ್ಣ ಬಳಕೆಯ ಮೇಲಿರುವ ಪ್ರಭುತ್ವವನ್ನು ವ್ಯಕ್ತಪಡಿಸುತ್ತದೆ.

ನಾಗರಸುಂದರಿ-ಉಪಗುಪ್ತ :

